ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 51 ಡಿಸೆಂಬರ್ 20, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಕಾ. ರಾಮಮೂರ್ತಿಯವರಿಗೆ ದುಃಖತಪ್ತ ಬೀಳ್ಕೊಡುಗೆ


ಡಿಸೆಂಬರ್ 16, ಮದ್ರಾಸಿನಲ್ಲಿ ಲಕ್ಷ ಲಕ್ಷ ಕಂಠಗಳಿಂದ ದುಃಖದ ಧ್ವನಿ ಮುಗಿಲು ಮುಟ್ಟುತ್ತಿದೆ. ಅಗಲಿದ ನೇತಾರ ಕಾ|| ರಾಮಮೂರ್ತಿಯವರಿಗೆ ಕೆಂಪು ವಂದನೆ ಸಲ್ಲಿಸುತ್ತಿದೆ. ಅಂದು ಹರಿದ ಕಣ್ಣೀರ ಧಾರೆಗೆ ಲೆಕ್ಕವಿಲ್ಲ. ಬಿಕ್ಕಿ ಬಿಕ್ಕಿ ಅತ್ತ ಅವರ ಮಗಳನ್ನು ಸಂತೈಸಲು ಹೋದ, 83 ರ ಹರೆಯದ ಧೀಮಂತ ನಾಯಕ ಕಾಂ.ಬಿ.ಟಿ.ಆರ್. ರವರಿಗೂ ದುಃಖ ತಡೆಯಲಾಗದೆ ಉಮ್ಮಳಿಸಿ ಉಕ್ಕಿ ಬಂದು ಕಣ್ಣೀರು ಗರೆದ ದೃಶ್ಯ. ಇದು ನೆರೆದಿದ್ದವರೆಲ್ಲರಲ್ಲಿ ಮತ್ತೊಂದು ಕಣ್ಣೀರ ಅಲೆಯನ್ನು ಹೊರ ಹೊಮ್ಮಿಸಿತು.

ಮಧ್ಯಾಹ್ನ ಎರಡು ಗಂಟೆಗೆ, ಪಿ.ರಾಮಮೂರ್ತಿಯವರ ಪಾರ್ಥಿವ ದೇಹದ ಮೆರವಣಿಗೆ ಒಟ್ಟೇರಿಯಲ್ಲಿನ ಪಕ್ಷದ ಕಛೇರಿಯಿಂದ ಆರಂಭವಾಯಿತು. 80 ವರ್ಷ ತುಂಬಿದ್ದ ಅವರ ದೀರ್ಘ ಕಾಲದ ಸೇವೆಯ ನೆನಪಿಗೆ 80 ಜನ ಕೆಂಪು ಸಮವಸ್ತ್ರಧಾರಿಗಳು ಮುಂದೆ ನಡೆದರು. ಅವರ ಹಿಂದೆ ಸಿ.ಪಿ.ಐ.(ಎಂ) ನ ರಾಷ್ಟ್ರೀಯ ನಾಯಕರು, ತಮಿಳು ನಾಡು ಘಟಕದ ನಾಯಕರು ಅವರ ಹಿಂದೆ ಲಕ್ಷ ಲಕ್ಷ ಜನ ಸ್ತೋಮ.

ಡಿಸೆಂಬರ್ 15 ರಂದು ಬೆಳಗ್ಗೆ 8 ಗಂಟೆಗೆ ಮದ್ರಾಸಿನ ಸರ್ಕಾರಿ ಜನರಲ್ ಆಸ್ಪತ್ರೆಯಲ್ಲಿ 22 ದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದ ಕಾಂ. ಪಿ. ಆರ್.ರವರ ನಿಧನ. ಅತಿ ಹೆಚ್ಚು ರಕ್ತ ದೊತ್ತಡ ಹಾಗೂ ಮೂತ್ರಪಿಂಡಗಳ ಬಾಧೆ ಯಿಂದ ನರಳುತ್ತಿದ್ದ ಇವರ ಎರಡೂ ಮೂತ್ರ ಪಿಂಡಗಳ ಕೆಲಸವೂ ಸ್ಥಗಿತವಾಗಿ ಡೈಯಾಲಿಸಿಸ್ ಚಿಕಿತ್ಸೆ ಪಡೆಯುತ್ತಿದ್ದರು. 1983 ರಲ್ಲಿ ಹೃದಯಾಘಾತಕ್ಕೆ ಒಳಗಾದಂದಿನಿಂದ ಮತ್ತೆ ಮತ್ತೆ ಅಸ್ವಸ್ಥರಾಗಿದ್ದ ಕಾಂ. ರಾಮಮೂರ್ತಿಯವರು ತಮ್ಮ ಜೀವಿತದ ಕೊನೆಯುಗಳಿಗೆಯವರೆಗೂ ದುಡಿಯುತ್ತಲೇ ಇನ್ನೆಂದಿಗೂ ಕಾಣದಾದರು.

(8 ನೇ ಪುಟ ನೋಡಿ)

ಕಾ. ಪಿ. ರಾಮಮೂರ್ತಿ ನಿಧನ



ಭಾರತ ಕಮ್ಯುನಿಸ್ಟ್ ಚಳುವಳಿಯ ಅಗ್ರಗಣ್ಯ ನೇತಾರ

ಕಾ. ಪಿ. ಆರ್ ಕಾರ್ಮಿಕರ, ರೈತರ ಹೃದಯಗಳಲ್ಲಿ ಎರಕಗೊಂಡ ಹೆಸರು. ಭಾರತದ ಕಮ್ಯುನಿಸ್ಟ್ ಚಳುವಳಿಯ ಇತಿಹಾಸದ ನಿರ್ಮಾಪಕರಲ್ಲೊಬ್ಬರು ಅವರು. ಹುಡುಗನಂತೋಡಾಡಿ ಕನಸುಗಳ ಬೆನ್ನಟ್ಟದೀ ನಿರಾಗಸ ವ್ಯಕ್ತಿ ಇನ್ನಿಲ್ಲ. ದೇಹ ಬಿರಿಕುಂಟೆಯಂತೆ ಕೊರಳಿಗೆ ಜೋತುಬಿದ್ದರೂ ಲೆಕ್ಕಿಸದೆ ಆಮರಣ ದುಡಿದ ಈ ಕಾರ್ಮಿಕ ಪ್ರೇಮಿ ಇನ್ನಿಲ್ಲ. ಚಿಕ್ಕಂದಿನಲ್ಲಿಯೇ ಕಾಲು ಊನವಾಗಿ ಕುಂಟುತ್ತಿದ್ದರೂ ಬದುಕಿನುದ್ದಕ್ಕೂ ಜೀವನೋತ್ಸಾಹ ತುಂಬಿ ಪುಟಿಪುಟಿದು ಜೀಕಳಿಸಿದವರು ಇವರು. ಜೀವನೋತ್ಸಾಹ ಇವರಿದ್ದೆಡೆಯಲ್ಲೆಲ್ಲಾ ಸಾಂಕ್ರಾಮಿಕವಾಗಿ ಎಲ್ಲರಿಗೂ ಹಬ್ಬುತ್ತಿತ್ತು. 1983 ರಲ್ಲಿ ಹೃದಯಾಘಾತದಿಂದ ಎಚ್ಚತ್ತ ನಂತರ ಯಾರು ಹಿಡಿದಿರಿಸಬೇಕೆಂದರೂ ನಿಲ್ಲದೆ ಮತ್ತೆ ಮತ್ತೆ ದುಡಿತದಲ್ಲಿ ತೊಡಗಿಕೊಂಡವರು ಇವರು.

ಇವರು ಕಟ್ಟಿದ ಚಳುವಳಿ,ಹೂಡಿದ ಅಸಂಖ್ಯ ಹೋರಾಟಗಳಲ್ಲಿ ಈ ಉತ್ಸಾಹ ಬುಗ್ಗೆಯಾಗುತ್ತಿತ್ತು. ಕಾರ್ಮಿಕರೆಲ್ಲರನ್ನೂ ದುಡಿವ ಜನರೆಲ್ಲರನ್ನೂ ತನ್ನ ಚುಂಬಕಶಕ್ತಿಯಿಂದಹಿಡಿಯುತ್ತಿತ್ತುದುಡಿಸುತ್ತಿತ್ತುಆರಂಭಕಾಲ

(8 ನೇ ಪುಟ ನೋಡಿ)

ಪಾಲಿಟ್ ಬ್ಯೂರೋ ಸಂತಾಪ

ಕಾ|| ಪಿ. ಆರ್. ನಿಧನದ ಸುದ್ದಿ ಬಂದ ಕೂಡಲೆ ಸಿ. ಪಿ. ಐ. (ಎಂ) ಕೇಂದ್ರ ಸಮಿತಿಯ ಕಛೇರಿಯಲ್ಲಿ ಕೆಂಬಾವುಟವನ್ನು ಅರ್ಧ ಮಟ್ಟಕ್ಕಿಳಿಸಲಾಯಿತು.

ಹಲವು ವರ್ಷಗಳು ಪಕ್ಷದ ಕೇಂದ್ರ ಸಮಿತಿ ಹಾಗೂ ಪಾಲಿಟ್ ಬ್ಯೂರೋದ ಸದಸ್ಯರಾಗಿದ್ದ ಪಿ. ಆರ್. ನಿಧನದ ಬಗ್ಗೆ ತನ್ನ ಸಂತಾಪ ಸೂಚಿಸಿ ಹೊರಡಿಸಿದ ಹೇಳಿಕೆಯಲ್ಲಿ ಸಿ. ಪಿ. ಐ. (ಎಂ) ನ ಪಾಲಿಟ್ ಬ್ಯೂರೋ ಅವರು ಎಷ್ಟೇ ಕಾಯಿಲೆಯಿದ್ದರೂ ಲೆಕ್ಕಿಸದೆ ಪಕ್ಷದ, ಜನ ಸಾಮಾನ್ಯರ ಮತ್ತು ಕಾರ್ಮಿಕ ವರ್ಗಕ್ಕೋಸ್ಕರ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು ಎಂದು ಶ್ರದ್ಧಾಂಜಲಿ ಅರ್ಪಿಸಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ, ಕಾಂಗ್ರೆಸ್ ಮುಖಂಡರಾಗಿದ್ದು, ಸಮಾಜವಾದದಲ್ಲಿ ಪೂರ್ಣ ನಂಬಿಕೆಯಿದ್ದ ಕಾ|| ಪಿ.ಆರ್. ನಂತರ ಕಾಂಗ್ರೆಸ್ ಸಮಾಜವಾದಿ ಪಕ್ಷ ಹಾಗೂ ಕಮ್ಯುನಿಸ್ಟ್ ಪಕ್ಷ ಸೇರಿದರು. ತಮಿಳು ನಾಡಿನಲ್ಲಿ ಕಮ್ಯುನಿಸ್ಟ್ ಆಂದೋಲನದ ಪ್ರವರ್ತಕರಾದ ಅವರು ಐವತ್ತು ವರ್ಷಕ್ಕೂ ಹೆಚ್ಚು ಕಾಲ ಅ[illegible]

(8 ನೇ ಪುಟ ನೋಡಿ)

ರಾಜ್ಯದ ಆಡಳಿತೆಯಲ್ಲಿ ಹಸ್ತಕ್ಷೇಪ ದೇಶದಐಕ್ಯತೆಗೆ ಮಾರಕ

ದೇಶದ್ರೋಹಿ ಚಟುವಟಿಕೆಗಳಲ್ಲಿ ನಿರತರಾಗಿರುವರೆಂಬ ಆರೋಪ ಹೊರಿಸಿ ವಿರೋಧ ಪಕ್ಷಗಳ ಚುನಾಯಿತ ಸರಕಾರಗಳನ್ನು ಉರುಳಿಸುವುದಾಗಿ ಘೋಷಿಸಿದ ಪ್ರಧಾನಮಂತ್ರಿ ರಾಜೀವಗಾಂಧಿಯವರ ಹೇಳಿಕೆಯನ್ನು ಏಳು ವಿರೋಧ ಪಕ್ಷಗಳ ಮುಖ್ಯಮಂತ್ರಿಗಳ ಸಭೆ ಬಲವಾಗಿ ಖಂಡಿಸಿ, ಅದು ಸರ್ವಾಧಿಕಾರಿ ಪ್ರವೃತ್ತಿಯನ್ನು ವ್ಯಕ್ತಮಾಡುತ್ತಿದೆಂದು ಆರೋಪ ಹೊರಿಸಿದ್ದಾರೆ. ಈ ಹಿಂದೆ ದಿ.ಇಂದಿರಾಗಾಂಧಿಯವರು ಆಂಧ್ರದ ಎನ್. ಟಿ. ರಾಮರಾವ್ ಸರಕಾರವನ್ನು ಅನ್ಯಾಯವಾಗಿ ಕಿತ್ತೊಗೆದಾಗ ಇಡೀ ಭಾರತ ದೇಶದ ಜನತೆಯೇ ಅದನ್ನು ಪ್ರತಿಭಟಿಸಿ ಕೇಂದ್ರ ಸರಕಾರ ತನ್ನ ನಿಲುವನ್ನು ಬದಲಾಯಿಸುವಂತೆ ಒತ್ತಾಯಿಸಿ ಮತ್ತೆ ಎನ್. ಟಿ. ಆರ್. ಸರಕಾರ ಅಧಿಕಾರದಲ್ಲುಳಿಯುವಂತೆ ಮಾಡಿದ ಚರಿತ್ರಾರ್ಹ ಘಟನೆಯನ್ನು ರಾಜೀವಗಾಂಧಿಯವರ ಸ್ಮರಣ ಶಕ್ತಿ ಮರೆತಂತೆ ಕಂಡು ಬರುತ್ತದೆ. ಇಂದು ದೇಶದ ಪರಿಸ್ಥಿತಿ ಸಾಕಷ್ಟು ಬದಲಾವಣೆಯಾಗಿವೆ. 1984 ಕ್ಕೂ 1987 ರ ಕೊನೆಯ ದಶಕಕ್ಕೂ ಬಹಳ ವ್ಯತ್ಯಾಸವಿತೆ ರಾಜೀವಗಾಂಧಿಯವರು ಮತ್ತೆ ದುಡುಕ್ಕಿದ್ದೇ ಆದರೆ ಪರಿಸ್ಥಿತಿ ಕೈ ಮೀರಿ ಹೋಗಬಹುದೆಂಬ ಎಚ್ಚರಿಕೆ ಕೊಡಬಯಸುತ್ತೇವೆ.

ಇತ್ತೀಚೆಗೆ ದಿಲ್ಲಿಯಲ್ಲಿ ನೆರೆದಿದ್ದ. ಹತ್ತು ಲಕ್ಷಕ್ಕೂ ಹೆಚ್ಚು ಜನ ಸಮೂಹ ರಾಜೀವಗಾಂಧಿಯವರ ಕಣ್ಣು ತೆರಸಿರಬೇಕು.

ರಾಜೀವಗಾಂಧಿಯವರ ಆರ್ಥಿಕ-ರಾಜಕೀಯ ಧೋರಣೆ ಕಾಂಗ್ರೆಯೇತರ ಮುಖ್ಯಮಂತ್ರಿಗಳೊಳಗೂ, ವಿರೋಧ ಪಕ್ಷಗಳೊಳಗೂ ಇನ್ನೂ ಹೆಚ್ಚು ಐಕ್ಯತೆಯನ್ನು ಸಾಧಿಸಲು ಅನುವು ಮಾಡಿ

(8 ನೇ ಪುಟ ನೋಡಿ)

ಕರ್ನಾಟಕದಲ್ಲಿ ಸೋವಿಯತ್ ಉತ್ಸವ

ಜಿ. ಎನ್. ಮೋಹನ್

ಜುಲೈ-3

ಒಂದು ಚಿಟಕಿ ಉಪ್ಪು, ಹಾಗೂ ಬ್ರೆಡ್ ತುಣುಕನ್ನು ರಾಜೀವ್ ಗಾಂಧಿಯವರಿಗೆ ನೀಡುತ್ತಿದ್ದಂತೆಯೇ ಭಾರತದ ಹಲವು ಹೆಜ್ಜೆಗಳು ಮೂಡಲಾರಂಭಿಸಿದವು ಕೆಥೆಡ್ರಲ್ ಗಡಿಯಾರದ ಘಂಟಾನಾದದ ಜೊತೆಗೆ ಶಂಖನಾದವು ಕೂಡುತ್ತಿದ್ದಂತೆ ಉತ್ಸವದ ಜ್ಯೋತಿ ಹೊತ್ತಿಸಲಾಯಿತು. ಮಿಖಾಯಿಲ್ ಗೋರ್ಬಚೇವ್ ಮತ್ತು ರಾಜೀವ್ ಗಾಂಧಿ ಕೈ ಕುಲುಕಿದರು. ಸೋವಿಯತ್ ಒಕ್ಕೂಟದ ತುಂಬ ಒಂದು ವರ್ಷದ ಸಾಂಸ್ಕೃತಿಕ ಗಾನಕ್ಕೆ ಇದು ಹಾದಿ ಮಾಡಿಕೊಟ್ಟಿತು.

ಸೋವಿಯತ್ ದೇಶದಲ್ಲಿ ಉತ್ಸಾಹದ ಹೆಜ್ಜೆಗಳು ಮೂಡಲಾರಂಭಿಸಿ ಐದು ತಿಂಗಳು ಕಳೆಯುತ್ತಿದ್ದಂತೆಯೇ ನವೆಂಬರ್ 21 ರಂದು ದೆಹಲಿಯ ಜವಹರಲಾಲ್ ನೆಹರೂ ಸ್ಟೇಡಿಯಂನಲ್ಲಿ ಸೋವಿಯತ್ ಜನರನ್ನು ಸ್ವಾಗತಿಸಲು ಭಾರತ ಸಜ್ಜಾಗಿತ್ತು. ಎಲ್ಲೆಡೆಯೂ ಹರಿದ ಉತ್ಸಾಹಕ್ಕೆಬುನಾದಿ ಹಾಕಿದ್ದು ಕ್ರೆಮ್ಲಿನ್ ಗಂಟೆಗಳ ಅನುರಣನ. ಈ ಗಂಟೆಗಳು ದನಿ ಹೊರಡಿಸುತ್ತಿದ್ದಂತೆ ವಿಶ್ವದ ಜನರ ಕೌತುಕಗಳಿಗೆ ಹಲವಾರು ರೀತಿಯಲ್ಲಿ ಕಾರಣವಾದ ಸೋವಿಯತ್ ದೇಶ ತನ್ನ ಒಡಲಿನ ಪುಟಗಳನ್ನು ತೆರೆಯಿತು.

ಎರಡೂ ದೇಶಗಳಜನಸಮುದಾಯದ ಬದುಕನ್ನು ಚಿತ್ರಿಸುವಲ್ಲಿ ಈ ಉತ್ಸವ ಯಶಸ್ವಿಯಾಗುತ್ತಿದೆ. ಸಮುದಾಯ ಬದುಕಿನ ಸೋವಿಯತ್ ದೇಶ ತನ್ನೆಲ್ಲಾ ಜಾನಪದ ಕಲೆಯನ್ನು ಈ ಉತ್ಸವದಲ್ಲಿ ಪ್ರದರ್ಶಿಸುತ್ತಿದೆ. ಈ ಜಾನಪದ ಕಲೆಗಳೂಸಹ ಇಡೀದೇಶದಾದ್ಯಂತ ಮೂಲೆ ಮೂಲೆಯ ಸಂಸ್ಕೃತಿಯನ್ನು ಬಿಂಬಿಸುವಂತೆ ಯೋಜಿಸಲಾಗಿದೆ.

ಸಾಂಸ್ಕೃತಿಕ ಸಂವಹನ ಇತರೆ ಎಲ್ಲಾ ಸಂವಹನ ಮಾಧ್ಯಮಕ್ಕಿಂತ ಮುಖ್ಯವಾದದ್ದು, ಒಂದೊಂದು ಸಂಸ್ಕೃತಿಗೂ ತನ್ನದೇ ಆದ ವ್ಯಾಕರಣ, ಭಾಷೆಗಳಿವೆ. ಆ ವ್ಯಾಕರಣ ಭಾಷೆಗಳನ್ನು ತಿಳಿಯಲು ಈ ಉತ್ಸವಗಳು ಹಾದಿ ಮಾಡಿ ಕೊಡುತ್ತವೆ. ಈ ಹಿಂದಿನ ಉತ್ಸವಗಳಲ್ಲಾದದ್ದು ಸಂಸ್ಕೃತಿಯತ್ತ ಒಂದು ನೋಟ. ಆದರೆ ಈ ಉತ್ಸವಗಳಲ್ಲಿ ಆಗುತ್ತಿರುವುದು ಸಂಸ್ಕೃತಿಯ ಬೆಸುಗೆ. ಅದಕ್ಕಾಗಿಯೇ ಅಪಾರ ಸಂಖ್ಯೆಯ ಕಲಾ ಪ್ರದರ್ಶನ ತಂಡಗಳು ಭಾಗವಹಿಸುತ್ತಿದ್ದು ತಮ್ಮ ಸಂಸ್ಕೃತಿಯ ಆಳ, ಹರವನ್ನು ಪರಿಚಯ ಮಾಡಿಕೊಡಲಿವೆ. ವರ್ಷದಾದ್ಯಂತ ನಡೆಯುವ ಈ ಉತ್ಸವವನ್ನು ಸೋವಿಯತ್ ಜನ, ಒಂದು ವರ್ಷದ ರಜ" ಎಂದೇ ಹೆಮ್ಮೆಯಿಂದ ಗುರುತಿಸಿದ್ದಾರೆ.

ಭಾರೀಸುದ್ದಿಯೊಂದಿಗೆಸೋವಿಯತ್ "ರಾಷ್ಟ್ರ ಉತ್ಸವ"ಪ್ರಾರಂಭವಾಗಿದೆ."ಓ ರಷ್ಯಾ ಬಗ್ಗೆ ನಮಗೆಏನೊಂದು ತಪ್ಪು ಕಲ್ಪನೆ ಇತ್ತು. ರಷ್ಯಾದಲ್ಲಿ ಏನೇನೋ ಇದೆ ಎಂದು ಗೊತ್ತೇ ಇರಲಿಲ್ಲ" ಎಂದು ಪ್ರೇಕ್ಷಕರು ಉದ್ಗರಿಸಿದ್ದಾರೆ. ರಷ್ಯಾ ಕಬ್ಬಿಣದ ಕೋಟೆ ಎಂದು ಮೂಗುಮುರಿಯುವರಿಗಾಗಿಯೇ ಎಂಬಂತೆ ಈ ಬಾರಿ"ಪಾಪ್, ಜಾಸ್" ಗಳನ್ನೂ ಈ ಉತ್ಸವದಲ್ಲಿ ಸೇರಿಸಲಾಗಿದೆ. ಅಲ್ಲಾ ಪುಗ ಚೇವ್, ಲಿ ಯಾ ನ್ ಟಿ ಯೇ ವ್ ರ ವ ರ ಪಾಪ್ ಗಾಯನ ಸಾಕಷ್ಟು ಸುದ್ದಿ ಮಾಡಿದೆ. ಪಾಪ್ ರಷ್ಯದಲ್ಲಿ ಎಂದು ಹಲವಷ್ಟು ಜನ ಬೆರಗಾಗಿದ್ದಾರೆ. ತನ್ನ ಹಲವಾರು ಮಕ್ಕಳೊಂದಿಗೆ ಉತ್ಸವಕ್ಕೆ ಬಂದ ಗೃಹಿಣಿಯೊಬ್ಬರು ನೃತ್ಯಗಳುನಿಜಕ್ಕೂ ಜೀವನದ ಪ್ರತಿಬಿಂಬವಾದರೆ ರಷ್ಯನ್ನರೂ ನಿಜಕ್ಕೂ ಅತ್ಯಂತ ಖುಷಿ ಬದುಕಿನವರು" ಎಂದು ಉದ್ಗರಿಸಿದ್ದಾರೆ.

ಮೈತ್ರಿಗೆ ನಾಂದಿ–

1985ರ ಮೇ ತಿಂಗಳಲ್ಲಿ ರಾಜೀವ್ ಗಾಂಧಿ ಮಾಸ್ಕೋಗೆ ಭೇಟಿ ನೀಡಿ ನಂತರ ಮಿಖಾಯಿಲ್ ಗೋರ್ಬಚೇವ್ ರವರು ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸಾಂಸ್ಕೃತಿಕ ವಿನಿಮಯದ ಮಹತ್ತರ ಒಪ್ಪಂದಕ್ಕೆ ಸಹಿ ಮಾಡಿದರು. ರಷ್ಯಾ ಹಾಗೂ ಭಾರತದ ಹಳೆಯ ಮಹತ್ತರ ಸಂಬಂಧಗಳ ಸವಿ ನೆನಪಿಗಾಗಿ "ಅಕ್ಟೋಬರ್ ಕ್ರಾಂತಿ" ಎಂದೇ ಹೆಸರಾಗಿರುವ 1917 ರ ರಷ್ಯನ್ ಮಹಾ ಕ್ರಾಂತಿಯ 70 ನೇ ವಾರ್ಷಿಕೋತ್ಸವ ಹಾಗೂ ಭಾರತದ 40 ನೆಯ ಸ್ವಾತಂತ್ರ್ಯೋತ್ಸವದ ನೆನಪಿಗಾಗಿ ಎರಡೂ ರಾಷ್ಟ್ರಗಳಲ್ಲಿ ಸಾಂಸ್ಕೃತಿಕ ಉತ್ಸವವನ್ನು ಪ್ರಾರಂಭಿಸಲಾಯಿತು. ಒಪ್ಪಂದದ ಪ್ರಕಾರ ನವೆಂಬರ್ 21 ರಂದು ರಷ್ಯನ್ನರು ಭಾರತದ ನೆಲದಲ್ಲಿ ಹೆಜ್ಜೆಗಳನ್ನು ಮೂಡಿಸಲಾರಂಭಿಸಿತು.

"ಉತ್ಸವ್" ಭಾರತಕ್ಕೆ ಅಪರೂಪದ ಪದವಲ್ಲ. ಫ್ರಾನ್ಸ್ ಹಾಗೂ ಅಮೇರಿಕಾದಲ್ಲಿ ಎರಡುಉತ್ಸವಗಳನ್ನು ಮುಗಿಸಿದೆ. ಈ ಎರಡೂ ಉತ್ಸವಗಳಿಗಿಂತಲೂಸೋವಿಯತ್ಉತ್ಸವಅತ್ಯಂತ ಮುಖ್ಯವಾದ ಉತ್ಸವವಾಗಿದೆ. ಅಮೇರಿಕಾ ಹಾಗೂ ಫ್ರಾನ್ಸ್‌ನೊಡನೆ ನಡೆದ ಉತ್ಸವದಲ್ಲಿ ಕೊಡುಕೊಳ್ಳುವಿಕೆಯ ಯಾವ ಸಾಂಸ್ಕೃತಿಕ ವಿನಿಮಯವೂ ಇರಲಿಲ್ಲ. ಮೊತ್ತ ಮೊದಲ ಬಾರಿಗೆ ರಷ್ಯಾ ಉತ್ಸವದಲ್ಲಿ ಸಾಂಸ್ಕೃತಿಕ ವಿನಿಮಯ ಮಾಡಲಾಗಿದೆ. ಈವರೆಗಿನ ಎರಡು ಉತ್ಸವದಲ್ಲಿ ಸಂಸ್ಕೃತಿಯ ಮೇಲ್ಪದರಗಳನ್ನಷ್ಟೇ ಪರಿಚಯ ಮಾಡಿಕೊಡಲಾಗಿತ್ತು. ಈ ಉತ್ಸವದಲ್ಲಿ ಅತ್ಯಂತ ಮಹತ್ತರ ಪಾತ್ರವಹಿಸಿರುವುದು ಜನಪದ ಕಲೆಗಳು. ಜಾನಪದ ಕಲೆಗಳಿಗೆ ಎರಡೂದೇಶಗಳ ಉತ್ಸವದಲ್ಲಿ ಪ್ರಾಮುಖ್ಯತೆ ಕೊಡಲಾಗಿದೆ.

ಕರ್ನಾಟಕಕ್ಕೆ–

ಇದೀಗ ಮುಂಬೈ ನಂತರ ಕರ್ನಾಟಕಕ್ಕೆ ಬರುತ್ತಿರುವ ತಂಡ ರಾಜ್ಯದ ಹಲವು ಸ್ಥಳಗಳಿಗೆ ಭೇಟಿ ಕೊಡಲಿದೆ. ಉತ್ಸವದ ಆಚರಣೆಯಲ್ಲಿ ಕರ್ನಾಟಕಕ್ಕೆ ವಿಶೇಷ ಮಹತ್ವ ಕೊಡಲಾಗಿದೆ. ಇಲ್ಲಿ 14 ರಷ್ಯನ್ ತಂಡಗಳ 1,250 ಕಲಾವಿದರು 37 ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ ಜಗತ್ ಪ್ರಸಿದ್ಧ ಬೊಲ್ಶೊಯ್ ಬ್ಯಾಲೆ ಪ್ರದರ್ಶನ ಸಹ ನಡೆಯಲಿದೆ.

ಡಿಸೆಂಬರ್ 19 ಹಾಗೂ 20 ರಂದು ಬೆಂಗಳೂರಿನಲ್ಲಿ ಉತ್ಸವದ ಉದ್ಘಾಟನೆ ಯಾದ ನಂತರ ಇಡೀ ತಿಂಗಳು ಧಾರವಾಡ, ಬಳ್ಳಾರಿ, ತುಮಕೂರು, ಕೆ.ಜಿ.ಎಫ್. ಹಾಸನ, ಮಂಡ್ಯ ಮೈಸೂರು, ಮಡಕೇರಿ ಮತ್ತು ಮಂಗಳೂರು ನಗರಗಳಲ್ಲಿ ಪ್ರದರ್ಶನ ನೀಡಲಿದೆ.

14 ರಷ್ಯನ್ ತಂಡಗಳ 1,250 ಕಲಾವಿದರು 37 ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ. ಜಗತ್ ಪ್ರಸಿದ್ಧ ಬೊಲ್ಶೊಯ್ ಬ್ಯಾಲೆ ಪ್ರದರ್ಶನ ಸಹ ನಡೆಯಲಿದೆ.

ಕರ್ನಾಟಕದಲ್ಲಿ ರಷ್ಯಾದ ಹೆಜ್ಜೆಗಳು ಡಿಸೆಂಬರ್ 19 ಹಾಗೂ 20 ರಂದು ಬೆಂಗಳೂರಿನಲ್ಲಿ ಉತ್ಸವದ ಉದ್ಘಾಟನೆ ಯಾದ ನಂತರ ಇಡೀ ತಿಂಗಳು ಧಾರವಾಡ, ಬಳ್ಳಾರಿ, ತುಮಕೂರು, ಕೆ.ಜಿ.ಎಫ್. ಹಾಸನ, ಮಂಡ್ಯ, ಮೈಸೂರು, ಮಡಕೇರಿ,ಮತ್ತು ಮಂಗಳೂರು ನಗರಗಳಲ್ಲಿ ಪ್ರದರ್ಶನ ನೀಡಲಿದೆ. ಕರ್ನಾಟಕದಲ್ಲಿ ನಡೆಯುವ ಈ ಉತ್ಸವಕ್ಕಾಗಿ ಕೇಂದ್ರ ಸರ್ಕಾರ 1.03 ಕೋಟಿ ರೂ. ವೆಚ್ಚ ಮಾಡುತ್ತಿದ್ದು ರಾಜ್ಯ ಸರ್ಕಾರ 5 ಲಕ್ಷ ರೂ ನೀಡುತ್ತಿದೆ.

ಈ ಉತ್ಸವದಲ್ಲಿ ರಷ್ಯಾಸಂಸ್ಕೃತಿಯ ಮಹತ್ತರವಾದ ಬ್ಯಾಲೆಯನ್ನು ಪ್ರದರ್ಶಿಸಲಾಗುತ್ತಿದೆ. ಇದಲ್ಲದೆ ಜಾನಪದ ನೃತ್ಯಗಳು ರಷ್ಯಾದ ಉಸಿರು. ಈ ಜಾನಪದ ಕಲೆಗಾರರನ್ನು ರಷ್ಯಾದಲ್ಲಿ 'ಪೀಪಲ್ಸ್ ಆರ್ಟಿಸ್ಟ್' ಎಂದು ಗೌರವಿಸಲಾಗುತ್ತದೆ. ಮ್ಯಾಸಿಯವ್ ಡಾನ್ಸ್ ಎನ್‌ಸೆಂಬಲ್ 150 ಜಾನಪದ ನೃತ್ಯಗಳನ್ನು ಮತ್ತು 15 ಗಣರಾಜ್ಯಗಳ ನೂರಾರು ಜಾನಪದ ನೃತ್ಯಗಳನ್ನು ಏರ್ಪಡಿಸಲಾಗಿದೆ.

ಹಿಮಕ್ಕೆ ಹಲವಾರು ಋತುಗಳನ್ನು ಒಡ್ಡಿಕೊಂಡಿರುವ ರಷ್ಯದಲ್ಲಿ 'ಹಿಮಾಕ್ರೀಡೆ' ಗಳು ಬದುಕಿನ ಅಂಗವಾಗಿವೆ. 'ಹಿಮ' ಅಲ್ಲಿನ ಸಂಸ್ಕೃತಿಯ ಮೇಲೂ ತಮ್ಮ ಪ್ರಭಾವ ಬೀರಿದೆ. ರಷ್ಯದ ಕಾಮನಬಿಲ್ಲು ಎಂದೇ ಹೆಸರಾದ ಬ್ಯಾಲೆ ಸಹ ಹಿಮ ಕ್ರೀಡೆಗಳಲ್ಲಿ ತನ್ನ ಉಗಮವನ್ನು ಹೊಂದಿದೆ ಎಂದು ಹೇಳಲಾಗುತ್ತದೆ ಬ್ಯಾಲೆಯ ಸಲೀಸು ನೃತ್ಯ 'ಸ್ಕೇಟಿಂಗ್' ನಿಂದ ವಿಕಾಸ ಹೊಂದಿರಬಹುದು ಎಂದು ಅಭಿಪ್ರಾಯವಿದೆ. 70 ನರ್ತಕರು ಹಿಮ ಬ್ಯಾಲೆಯ ಪ್ರದರ್ಶನ ನೀಡುತ್ತಾರೆ. ಇದರೊಂದಿಗೆ ಉಜ್ಬೆಕಿಸ್ತಾನದ 'ಬಹೋರ್' ನೃತ್ಯ ಮೇಳ 'ಯಲ್ಲಾ' ವಾದ್ಯ ಸಂಗೀತಮೇಳ ವಿಲ್ನಿಯಸ್‌ನ ಲೆಲೆ ಗೊಂಬೆಯಾಟವನ್ನು ಪ್ರದರ್ಶಿಸಲಾಗುವುದು ಸರ್ಕಸ್ ರಷ್ಯಾ ಉಳಿಸಿಕೊಂಡು ಬಂದಿರುವ ಮತ್ತೊಂದು ಮನರಂಜನೆಯ ತಂತು ಈ ಉತ್ಸವದಲ್ಲಿ ಸರ್ಕಸ್ಸಿನದು ಸಿಂಹಪಾಲು.

ರಷ್ಯಾದ ಕಬ್ಬಿಣದ ಗೋಡೆಯ ಹಿಂದೆ ಪಾಶ್ಚಾತ್ಯ ಸಂಸ್ಕೃತಿ ಹೇಗೆ ಅರಳಿತು ಎಂದು ವಾದ ಮಾಡುವವರಿಗಾಗಿಯೇ ಎಂಬಂತೆ ಈ ಉತ್ಸವದಲ್ಲಿ ರಾಕ್ ಹಾಗೂ ಪಾಪ್ ಹಾಡುಗಳ ಕಾರ್ಯಕ್ರಮವಿದೆ.

ವಾದ್ಯ ಗೊಂಬೆಯಾಟ, ಸಂಗೀತ ಮೇಳ, ನಾಟಕ, ಜನಪದ ಮೇಳಗಳೇ ಹೆಚ್ಚಾಗಿ ತುಂಬಿರುವ ಉತ್ಸವದ 2ನೇ ಹಂತ ಜನವರಿಯಲ್ಲಿ ಪ್ರಾರಂಭವಾಗುತ್ತದೆ. ಮೂರನೇ ಹಂತ ಮೇ ತಿಂಗಳಲ್ಲಿ ಪ್ರಾರಂಭವಾಗುವುದು. ಇದರಲ್ಲಿ ಬಹುಸಂಖ್ಯ ಪಾಲು ಪ್ಲಾಸ್ಟಿಕ್ ರಂಗ ಎಂದೇ ಹೆಸರಾಗಿರುವ ಮೂಕಾಭಿನಯ ತಂಡ ಹಾಗೂ ಜಿಪ್ಸಿಗಳ 'ರೋಮೆನ್' ತಂಡದ್ದು. ನಾಲ್ಕನೆಯ ಹಾಗೂ ಕೊನೆಯ ಹಂತ ಆಗಸ್ಟ್‌ನಲ್ಲಿ 10 ತಂಡದೊಂದಿಗೆ ಭಾರತದ ಎಲ್ಲಾ ದಿಕ್ಕಿನಲ್ಲೂ ಪ್ರವಾಸ ಮಾಡಲಿದೆ.

ಅಕ್ಟೋಬರ್ ಕ್ರಾಂತಿಯಿಂದ ಫಲಿಸಿದ ಕಲೆ ಎಂಬ ಘೋಷಣೆಯೊಂದಿಗೆ ಲೆನಿನ್‌ರ ಸಾಧನೆ ಕುರಿತ ಚಿತ್ರ ಪ್ರದರ್ಶನ ಈ ಉತ್ಸವದ ಮೈಲಿಗಲ್ಲು.

ಬೆಸೆದ ನೋಟ–

'ಹೃದಯಕ್ಕೆ ರಹದಾರಿ ಹೊಟ್ಟೆಯ ಮೂಲಕ' ಎನ್ನುವ ರಷ್ಯನ್ನರ ಆಹಾರ ಪ್ರದರ್ಶನಗಳನ್ನೂ ಒಳಗೊಂಡಂತೆ ಎಲ್ಲಾ ಕಲಾ ಪ್ರದರ್ಶನಗಳ ಪರಿಪಾಕ ರಷ್ಯಾ ಹಾಗೂ ಭಾರತದ ಬೆಸುಗೆಗೆ ನಾಂದಿಯಾಗಲಿ ಎಂಬ ಆಶಾಕಿರಣದೊಂದಿಗೆ ಈ ಎರಡು ಉತ್ಸವಗಳು ಪ್ರಾರಂಭವಾಗಿವೆ. ಎರಡು ಮಹತ್ತರ ಘಟನೆಗಳ ಸವಿನೆನಪು ಈ ಎರಡು ಬೃಹತ್ ದೇಶಗಳನ್ನು ಹತ್ತಿರಹತ್ತಿರಕ್ಕೆ ತರಲಿವೆ. 1970ರಲ್ಲಿ ನಡೆದ ಮೊದಲನೆಯ ರಷ್ಯ ಹಾಗೂ ಭಾರತದ ಬಾಂಧವ್ಯದ ಒಪ್ಪಂದ ತನ್ನ ಯಶಸ್ವಿ ಹದಿನೈದು ವರ್ಷಗಳನ್ನು ಮುಗಿಸಿ ತದನಂತರದ ದಿನಗಳಲ್ಲಿ ಇದನ್ನು ಸಾಧಿಸಲು ಈ ಉತ್ಸವಗಳು ಸಾಂಸ್ಕೃತಿಕ ರಾಯಭಾರಿಗಳಾಗಿ ಕೆಲಸ ಮಾಡುತ್ತಿವೆ.

ವಿಜ್ಞಾನಿಗಳು ಸಹ ಇದಕ್ಕೆ ಧ್ವನಿಗೂಡಿಸುತ್ತಾರೆ. ಭಾರತ ಲಕ್ಷಾಂತರ ವರ್ಷಗಳಿಂದ ಉತ್ತರದ ಕಡೆ ಭೌಗೋಳಿಕವಾಗಿ ಸರಿಯುತ್ತಿದೆ. ಭೌಗೋಳಿಕ ತಜ್ಞರ ಪ್ರಕಾರ ಇತ್ತೀಚೆಗೆ ವರ್ಷಕ್ಕೆ 1.5ಸೆಂ.ಮಿ. ನಷ್ಟು ರಷ್ಯಾದತ್ತ ಜರುಗುತ್ತಿದೆ. ಈ ಉತ್ಸವಗಳು ಭಾರತ ಹಾಗೂ ರಷ್ಯವನ್ನು ಇನ್ನಷ್ಟು ಹತ್ತಿರ ತರಲಿವೆ. ○

ಸಂಕ್ಷಿಪ್ತ ಸುದ್ದಿಗಳು

ಡಿ.ವೈ.ಎಫ್.ಐ. ಗಮನಾರ್ಹ ಮುನ್ನಡೆ

ನವಂಬರ್ 22ರಂದು ಪಂಜಾಬ್ ರಾಜ್ಯ ಡಿ.ವೈ.ಎಫ್.ಐ. ಘಟಕ ಜಲಂಧರ್‌ನಲ್ಲಿ ತನ್ನ ಸಂಘಟನಾ ಸಮಾವೇಶ ನಡೆಸಿತು.113 ಪ್ರತಿನಿಧಿಗಳು ಭಾಗವಹಿಸಿದ್ದ ಸಮಾವೇಶ ಅಖಿಲಭಾರತ ಡಿ.ವೈ.ಎಫ್.ಐ. ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡಿದಲ್ಲದೆ ಹೊಸಕಾರ್ಯಕಾರಿ ಸಮಿತಿಯನ್ನು ಚುನಾಯಿಸಿತು. ಸಾಮ್ರಾಜ್ಯಶಾಹಿ ಬೆಂಬಲದ ಖಾಲಿಸ್ತಾನಿ ಭಯೋತ್ಪಾದಕರ ವಿರುದ್ಧ ಹೋರಾಟ ತೀವ್ರ ಬಲಗೊಳಿಸಲು ಮತ್ತು ರಾಜ್ಯದ ಯುವಕರಲ್ಲಿ ಪ್ರಜಾಸತ್ತಾತ್ಮಕ ಭಾವನೆ ಬಲಗೊಳಿಸಲು ಸಮಾವೇಶ ಎಡೆಬಿಡದೆ ಕೆಲಸ ಮಾಡಲು ನಿರ್ಧರಿಸಿತು. ಕಾ.ಉಪ್ಪಾಲ್ ಸೇರಿದಂತೆ ಹಲವು ಕಾಮ್ರೇಡ್‌ಗಳನ್ನು ಈ ಹೋರಾಟದಲ್ಲಿ ಬಲಿಕೊಟ್ಟಿರುವ ಈ ಘಟಕ, ಈ ಸವಾಲನ್ನು ಧೈರ್ಯದಿಂದ ಎದುರಿಸುತ್ತಿದೆ.

ಹೈ ಕೋರ್ಟ್ ತೀರ್ಪಿಗೆ ಸ್ವಾಗತ

ದೇವರಲಾ ಸತಿ ಪ್ರಕರಣದಲ್ಲಿ ಬಂಧಿತರಾಗಿರುವವರನ್ನು ಬಿಡುಗಡೆ ಮಾಡಲು ಧರ್ಮ ರಕ್ಷಾ ಸಮಿತಿ ಹಾಕಿದ್ದ ರಿಟ್ ಹೈಕೋರ್ಟ್ ತೀರ್ಪನ್ನು, ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಸ್ವಾಗತಿಸಿದೆ. ಈ ತೀರ್ಪು ಸತಿ 'ಧಾರ್ಮಿಕ ಸಂಪ್ರದಾಯವೂ ಅಲ್ಲ....... ಅಥವಾ ಧಾರ್ಮಿಕ ನಂಬಿಕೆಯೆಂದೂ ಹೇಳುವಂತಿಲ್ಲ' ಎಂದು ಹೇಳಿವೆ. "ವಿಧವೆಯ ದಹನ, ಸ್ವಯಂ ಬುದ್ಧಿಯಿಂದ ಅಥವಾ ಬಲಾತ್ಕಾರದಿಂದ ಧಾರ್ಮಿಕ ಸ್ವಾತಂತ್ರ್ಯದ ಭಾಗವೆಂದು ಹೇಳಲಾಗದು." ಎಂದಿರುವ ತೀರ್ಪು, ಜನರ ಮೂಲಭೂತ ಹಕ್ಕುಗಳ ವಿರುದ್ಧ 'ಧಾರ್ಮಿಕ ಸ್ವಾತಂತ್ರ್ಯ' ಹೋಗಲಾರದು ಎಂದು ಸ್ಪಷ್ಟವಾಗಿ ತಿಳಿಸಿದೆ.

ಸರ್ಕಾರದ ಕಾರ್ಮಿಕ ವಿರೋದಿ ನೀತಿ ವಿರುದ್ಧ
ಸಿ. ಐ. ಟಿ. ಯು. ಪ್ರತಿಭಟನಾ ರ್‍ಯಾಲಿ

ಬೆಂಗಳೂರು ನಗರದ ಹಲವಾರು ಕಾರ್ಖಾನೆಗಳ ಹೋರಾಟದಲ್ಲಿರುವ ಕಾರ್ಮಿಕರು ಸಿ.ಐ.ಟಿ.ಯು. ಬೆಂಗಳೂರು ಜಿಲ್ಲಾ ಸಮಿತಿ ಆಶ್ರಯದಲ್ಲಿ ಮೈಸೂರು ಬ್ಯಾಂಕ್ ವೃತ್ತದಿಂದ ಹೊರಟ ಸಹಸ್ರಕ್ಕೂ ಮೀರಿದ ಕಾರ್ಮಿಕರ ಮೆರವಣಿಗೆಯು ನೇತೃತ್ವವನ್ನು ಮುಖಂಡರುಗಳಾದ ಕಾಂ. ಟಿ. ಎಸ್. ಅನಂತರಾಮ್, ಆರ್. ಶ್ರೀನಿವಾಸ್, ಕೆ.ಎಸ್.ಸುಬ್ರಮಣಿ, ನಾರಾಯಣರಾವ್ ಬಾನು, ಜಾನ್ ವಿನ್ಸೆಂಟ್‌ರವರು ವಹಿಸಿದ್ದರು.

ಬಹು ರಾಷ್ಟ್ರೀಯ ಕಂಪನಿ ಐ.ಟಿ.ಸಿ, ಭಾರತ ಮಾತಾ ವಾಚ್ ಕಂಪನಿ, ಎ. ಎಸ್.ಟಿ, ಇಂಡಿಯಾಟೆನ್‌ಕಾರ್ಖಾನೆ, ಐ.ಸಿ.ಬಿ, ಸಪ್ತಗಿರಿ ಡಿಸ್ಟಲರಿ, ಯು.ಬಿ ಕಾಂಟ್ರಾಕ್ಟರ ಬೈಟ್ ಬಾಟಲ್ಸ್. ಹರ್ಬರ್ಟ್‌ಇಂಡಿಯಾ, ಸೂರಿ ಅಂಡ್ ನಾಯರ್, ಮುಂತಾದ ಹತ್ತಾರು ಕಾರ್ಖಾನೆಗಳ ಕಾರ್ಮಿಕರು ಎದುರಿಸುತ್ತಿರುವ ವಜಾ, ಲಾಕೌಟ್, ಬೀಗ ಮುದ್ರೆ ಮುಂತಾದ ಹಲವಾರು ಸಮಸ್ಯೆಗಳನ್ನು ಬಗೆಹರಿಸಲು ರಾಜ್ಯ ಸರ್ಕಾರ ಕೂಡಲೇ ಮಧ್ಯೆ ಪ್ರವೇಶಿಸಬೇಕೆಂದು ಪ್ರದರ್ಶನಕಾರರು ಒತ್ತಾಯಿಸಿದರು.

ಕಬ್ಬನ್ ಪಾರ್ಕಿನಲ್ಲಿ ನಡೆದ ಬಹಿರಂಗ ಸಭೆಯ ಪ್ರಾರಂಭದಲ್ಲಿ ಇತ್ತೀಚಿಗೆ ನಿಧನರಾದ ಕಾರ್ಮಿಕ ಧುರೀಣ ಕಾಂ. ಪಿ. ರಾಮಮೂರ್ತಿ ಯವರಿಗೆ ಶ್ರದ್ಧಾಂಜಲಿ ಅರ್ಪಿಸಿತು. ಮೊದಲಿಗೆ ಸಭೆಯನ್ನುದ್ದೇಶಿಸಿ ಮಾತನಾಡಿದ ಕಾ. ಟಿ. ಎಸ್. ಅನಂತರಾಮ್‌ರವರು ಐ.ಟಿ.ಸಿ. ಕಾರ್ಖಾನೆ ಕಾರ್ಮಿಕರು ಆಡಳಿತ ವರ್ಗ ಮಂಡಿಸಿರುವ ಷರತ್ತುಗಳ ಪಟ್ಟಿ,ಆಧುನಿಕ ಯಂತ್ರಜೋಡಿಸಿ ಕಾರ್ಮಿಕರನ್ನು ವಜಾ ಮಾಡುವ ಸಂಬಳ ಮತ್ತುಬೋನಸ್‌ನ್ನು ಉತ್ಪಾನೆಗೆ ಲಗತ್ತಿಸುವ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಹೋರಾಟ ನಡೆಸುತ್ತಿದ್ದಾರೆಂದು ವಿವರಿಸಿದರು.

ಭಾರತ ಮಾತಾ ವಾಚ್ ಕಂಪನಿ ಕರ್ನಾಟಕ ಸರ್ಕಾರದ ಹರಿಜನ-ಗಿರಿಜನ ಅಭಿವೃದ್ಧಿ ನಿಗಮದ ಹೆಸರಿನಲ್ಲಿ ನಡೆಯುತ್ತಿದ್ದು ಮಹಿಳೆಯರನ್ನೊಳಗೊಂಡಿರುವ ಈ ಕಾರ್ಖಾನೆಯಲ್ಲಿ ವಿದ್ಯಾವಂತ ಮಹಿಳೆಯರನ್ನು 10-12ವರ್ಷದಿಂದಲೂ 250-300ರೂ ಗಳಿಗೆ ದುಡಿಸಿಕೊಳ್ಳುವ ಮೂಲಕ ವಂಚನೆ ಮಾಡಲಾಗುತ್ತಿದೆ ಎಂದರು. ವಿಚಾರಣೆಯಿಲ್ಲದೆ, ಮಿಥ್ಯಾರೋಪಗಳನ್ನು ಮಾಡಿ ಹೊರಿಸಿ ವಜಾ ಮಾಡಲಾಗುತ್ತಿದೆ. ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ಮನೆ ಮುಂದೆ ಕಾರ್ಖಾನೆ ಮುಂದೆ ಎಲ್ಲಾ ರೀತಿಯ ಹೋರಾಟ ನಡೆಸಿರುವ ಈ ಕಾರ್ಮಿಕರಿಗೆ ಕೇವಲ ಭರವಸೆಗಳನ್ನು ಮಾತ್ರ ನೀಡಲಾಗಿದೆ. ಎಂದು ಟೀಕಿಸಿದರು.

ಅಕ್ರಮ ಬೀಗ ಮುದ್ರೆ ವಿರುದ್ಧ ಹೋರಾಟ ನಡೆಸುತ್ತಿರುವ ಎ. ಎಸ್. ಟಿ. ಕಾರ್ಮಿಕರು, ಶೇ.20 ಬೋನಸ್ಸು ಬೇಡಿಕೆಗಾಗಿ ಮುಷ್ಕರದಲ್ಲಿರುವ ಹರ್ಬರ್ಟ್ ಇಂಡಿಯಾ, ಅಕ್ರಮ ಬೀಗ ಮುದ್ರೆ ಮತ್ತು ರೀಟ್ರೆಂಚ್‌ಮೆಂಟ್ ವಿರುದ್ಧ ಕಳೆದ ಜೂನ್‌ನಿಂದ ಹೋರಾಟದಲ್ಲಿರುವ ಇಂಡಿಯಾಟೆನ್ ಕಾರ್ಖಾನೆ ಕಾರ್ಮಿ ಹೋರಾಟಗಳ ಕುರಿತು ವಿವರಿಸಿದರು. ಈ ಎಲ್ಲಾ ಕಾರ್ಮಿಕರ ಬೇಡಿಕೆಗಳ ಕುರಿತು ಸರ್ಕಾರ ಹಾಗೂ ಕಾರ್ಮಿಕ ಇಲಾಖೆ ಯಾವುದೇ ಕ್ರಮ ಕೈಗೊಳ್ಳುವಲ್ಲಿ ಸಂಪೂರ್ಣ ವಿಫಲಗೊಂಡಿದೆ ಎಂದರು.

ನಂತರ ಮಾತನಾಡಿದ ಕಾ॥ ಆರ್. ಶ್ರೀನಿವಾಸ್‌ರವರು ದುಡಿಯುವ ಜನತೆಯ ಬೆಂಬಲ ಪಡೆದು ಅಧಿಕಾರಕ್ಕೆ ಬಂದ ಜನತಾ ಸರ್ಕಾರ ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸುವಯಾವುದೇ ಪ್ರಮಾಣಿಕ ಪ್ರಯತ್ನವನ್ನು ಮಾಡುತ್ತಿಲ್ಲವೆಂದರು.

ನಿಯೋಗವೊಂದು ತೆರಳಿ ರಾಜ್ಯ ಸರ್ಕಾರಕ್ಕೆ ಮನವಿಯನ್ನು ಅರ್ಪಿಸಿ ಹೋರಾಟದಲ್ಲಿರುವ ಕಾರ್ಮಿಕ ಸಮಸ್ಯೆಗಳನ್ನೂ ಕೂಡಲೇ ಇತ್ಯರ್ಥಗೊಳಿಸಬೇಕೆಂದು ಒತ್ತಾಯಿಸಿತು. ಬೇಡಿಕೆ ಈಡೇರದಿದ್ದಲ್ಲಿ ನಗರದ ಸಿ. ಐ. ಟಿ. ಯು. ಗೆ ಸೇರಿದ ಎಲ್ಲಾ ಕಾರ್ಖಾನೆಗಳ ಕಾರ್ಮಿಕರ ಸಮಾವೇಶವೊಂದನ್ನು ಸಂಘಟಿಸಿ ಒಂದು ದಿನದ ಸಾರ್ವತ್ರಿಕ ಮುಷ್ಕರ ನಡೆಸಲು ಕರೆ ನೀಡಲಾಗುವುದೆಂದು ಮನವಿಯಲ್ಲಿ ಎಚ್ಚರಿಸಲಾಗಿದೆ.

"ಐಕ್ಯರಂಗ" ಓದುಗರ ಪ್ರಶ್ನೆಗಳಿಗೆ
ಕಾಂ. ಇ. ಎಂ.ಎಸ್. ರವರಿಂದ ಉತ್ತರ

ಪಕ್ಷದ ಕೇರಳ ಸಮಿತಿಯ ಮುಖವಾಣಿ "ಚಿಂತಾ"ದಲ್ಲಿ ಕಾ॥ ಇ. ಎಂ. ಎಸ್. ರವರ ಪ್ರಶ್ನೋತ್ತರವನ್ನು ಈಗಾಗಲೇ ಐಕ್ಯರಂಗದಲ್ಲಿ ಪ್ರಕಟಿಸುತ್ತಿದ್ದೇವೆ. ಈಗ ಕಾ॥ ಇ.ಎಂ.ಎಸ್. ರವರು "ಐಕ್ಯರಂಗ"ದ ಓದುಗರು ಕೇಳುವ ಪ್ರಶ್ನೆಗಳಿಗೂ ಉತ್ತರ ನೀಡಲು ಒಪ್ಪಿದ್ದಾರೆ. ಐಕ್ಯರಂಗದ ಓದುಗರೆಲ್ಲರೂ ಪ್ರಸ್ತುತ ರಾಷ್ಟ್ರೀಯ—ಅಂತರ ರಾಷ್ಟ್ರೀಯ ಪರಿಸ್ಥಿತಿಗೆ ಸಂಬಂಧಿಸಿ ಪ್ರಶ್ನೆಗಳನ್ನು ಕೇಳಬಹುದು. ನಮಗೆ ಬರುವ ಪ್ರಶ್ನೆಗಳೆಲ್ಲವನ್ನು ಇಂಗ್ಲೀಷಿಗೆ ಅನುವಾದಿಸಿ ಈ ಪ್ರಶ್ನೆಗಳಲ್ಲಿ ಆಯ್ಕೆ ಮಾಡಿಕೊಂಡು ಕಳುಹಿಸಿಕೊಡಲಾಗುವುದು. ಕಾ॥ ಇ. ಎಂ. ಎಸ್. ರವರು ನೀಡುವ ಉತ್ತರವನ್ನು ಅನುವಾದಿಸಿ ಪ್ರಕಟಿಸಲಾಗುವುದು. ರಾಜಕೀಯ, ಸಾಂಸ್ಕೃತಿಕ, ಸೈದ್ಧಾಂತಿಕ ರಂಗಗಳ ಬಗ್ಗೆ ತಮ್ಮ ಸಂದೇಹಗಳಿಗೆ ಪರಿಹಾರ ಪಡೆಯುವ ಈ ಸುವರ್ಣಾವಕಾಶವನ್ನು "ಐಕ್ಯರಂಗ"ದ ಓದುಗರೆಲ್ಲರೂ ಬಳಸಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ವ್ಯವಸ್ಥಾಪಕರು

ಎಸ್‌ಎಫ್‌ಐ ರಾಜ್ಯಮಂಡಳಿ ತೀರ್ಮಾನ

ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಮಂಡಳಿ ಸಭೆಯು ಡಿ.13ರಂದು ಬೆಂಗಳೂರಿನಲ್ಲಿ ಜರುಗಿತು.

ನೂತನವಾಗಿ ರೂಪಿಸಿರುವ ಕುವೆಂಪು ವಿ.ವಿ.ಗೆ ಕೂಡಲೇ ಉಪಕುಲಪತಿಗಳನ್ನು ನೇಮಕಮಾಡಿ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕೆಂದು ಹಾಗೂ ಯು.ಜಿ.ಸಿ. ಅನುದಾದವನ್ನು ಪಡೆಯಬೇಕೆಂದು ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಮಂಡಳಿ ಸಭೆಯು ಸರಕಾರವನ್ನು ಒತ್ತಾಯಿಸಿದೆ.

ಕ್ಯಾಪಿಟೇಷನ್ ಶುಲ್ಕ ಪದ್ಧತಿಯ ಪ್ರಶ್ನೆಯನ್ನು ಕೇವಲ ಪ್ರಚಾರ ಸಾಧನವಾಗಿ ಬಳಸಿಕೊಳ್ಳದೆ ಪ್ರಾಮಾಣಿಕ ಜಾರಿಗೊಳಿಸಬೇಕೆಂದು ಸಭೆಯು ಒತ್ತಾಯಿಸಿದೆ.

ಇತ್ತೀಚೆಗೆ ನಡೆಸಲಾಗಿರುವ ಎಸ್. ಎಸ್.ಎಲ್.ಸಿ. ಪರೀಕ್ಷಾ ಶುಲ್ಕವನ್ನು ಹಿಂದಿನ ಮಟ್ಟಕ್ಕೇ ಇಳಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಲಾಗಿದೆ.

ಕಾ.ಪಿ.ರಾಮಮೂರ್ತಿ ನಿಧನಕ್ಕೆ ಸಂತಾಪ

ವಿದ್ಯಾರ್ಥಿ ದೆಸೆಯಿಂದಲೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಮುಕಿ, ಸೈಮನ್ ಕಮಿಷನ್ ವಿರುದ್ಧವಾಗಿ ವಿಶ್ವವಿದ್ಯಾನಿಲಯದವಿದ್ಯಾರ್ಥಿಗಳನ್ನು ಸಂಘಟಿಸಿದ ಅಪ್ರತಿಮ ದೇಶ ಪ್ರೇಮಿ, ಸಿ.ಪಿ.ಐ.(ಎಂ) ಪಕ್ಷದ ಅಗ್ರಗಣ್ಯ ನಾಯಕರಲ್ಲೊಬ್ಬರಾದ ಕಾ.ಪಿ.ರಾಮಮೂರ್ತಿಯವರ ನಿಧನಕ್ಕೆ ಸಂತಾಪ ಸೂಚಿಸಿ ಇವರ ನಿಧನದಿಂದ ದೇಶದ ಎಡ ಮತ್ತು ಪ್ರಜಾಪ್ರಭುತ್ವ ಚಳುವಳಿಗೆ ತುಂಬಲಾರದ ನಷ್ಟ ಉಂಟಾಗಿದೆ ಎಂದು ರಾಜ್ಯ ಸಮಿತಿಯು ತನ್ನ ಶೋಕ ವ್ಯಕ್ತಪಡಿಸಿದೆ.

ಡಿ, 20–22 ದ. ಕ. ಜಿಲ್ಲಾ ಸಮ್ಮೇಳನ

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯುನಿಯನ್‌ನ ದ. ಕ. ಜಿಲ್ಲಾ ಸಮ್ಮೇಳನ ಡಿಸಂಬರ್ 20 ರಿಂದ 22 ರ ವರೆಗೆ ಕುಂದಾಪುರದಲ್ಲಿ ಜರುಗಲಿದೆ. ನವಂಬರ್ 30 ರಂದು ಕಾ॥ ಅಬ್ರಹಾಂ ಕರ್ಕಡ ರವರ ಅಧ್ಯಕ್ಷತೆಯಲ್ಲಿ 70 ಜನರ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಅಧ್ಯಕ್ಷರಾಗಿ ಕಾ॥ ಅಬ್ರಹಾಂ ಕರ್ಕಡ, ಕಾರ್ಯದರ್ಶಿಯಾಗಿ ಕಾ॥ ಕೆ. ಶಂಕರ್ ಹಾಗೂ ಖಜಾಂಚಿಯಾಗಿ ಕಾ॥ ಸಿ. ನಾರಾಯಣ ರವರು ಆಯ್ಕೆಗೊಂಡಿರುತ್ತಾರೆ.

ದೇಶದ ಕಾರ್ಮಿಕ ಚಳುವಳಿಯಲ್ಲಿ ಸಿ. ಐ. ಟಿ. ಯು. ವಹಿಸುತ್ತಿರುವ ಸಮರಶೀಲ ಪಾತ್ರ, ಐಕ್ಯ ಚಳುವಳಿಯ ಮಹತ್ವ ಕಾರ್ಮಿಕ ವರ್ಗದ ಸಮಸ್ಯೆಗಳಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸ್ಪಂದಿಸಿ ಸಂಘಟಿಸಲು 3 ನೇ ಜಿಲ್ಲಾ ಸಮ್ಮೇಳನ ನಾಂದಿಯಾಗುವಂತೆ ಮಾಡಲು ಎಲ್ಲಾ ಕಾರ್ಯಕರ್ತರು ಸಮ್ಮೇಳನದ ಯಶಸ್ವಿಗೆ ಶ್ರಮಿಸಬೇಕೆಂದು ಕರೆ ನೀಡಿದರು.

ಡಿಸಂಬರ್ 22 ರಂದು ಸಮ್ಮೇಳನದ ಅಂತ್ಯದಲ್ಲಿ ನಡೆಯುವ ಬಹಿರಂಗ ಸಭೆಯಲ್ಲಿ ಕೇರಳದ ಮುಖ್ಯ ಮಂತ್ರಿಯವರಾದ ಕಾ॥ ಇ. ಕೆ. ನಾಯನಾರ್ ಮತ್ತು ಸಿ. ಐ. ಟಿ. ಯು. ಅಖಿಲ ಭಾರತ ಉಪಾಧ್ಯಕ್ಷರಾದ ಕಾ॥ ಉಮಾನಾಥ್ ಹಾಗೂ ಸಿ. ಐ. ಟಿ. ಯು. ರಾಜ್ಯ ಸಮಿತಿ ಕಾರ್ಯದರ್ಶಿ ಕಾ॥ ಸಿ. ನಂಜುಂಡಪ್ಪ ಹಾಗೂ ಅಧ್ಯಕ್ಷ ಕಾ॥ ಸೂರ್ಯ ನಾರಾಯಣ ರಾವ್ ರವರುಗಳು ಮಾತನಾಡಲಿದ್ದಾರೆ.

ಕುಂದಾಪುರ ಬೀಡಿ ಕಾರ್ಮಿಕರ ಸಮಾವೇಶ

ಕುಂದಾಪುರ ತಾಲ್ಲೋಕು ಮಟ್ಟದ ಬೀಡಿ ಕಾರ್ಮಿಕರ ಸಮಾವೇಶ ನವಂಬರ್ 15 ರಂದು ಕಾ॥ ಕೆ. ಶಂಕರ್ ರವರ ಅಧ್ಯಕ್ಷತೆಯಲ್ಲಿ ಕುಂದಾಪುರದಲ್ಲಿ ಜರುಗಿತು.

ಆರಂಭದಲ್ಲಿ ಕಾರ್ಯದರ್ಶಿ ಸ್ವಾಗತಿಸಿ ಸಮಾವೇಶದ ಮಹತ್ವ ಹಾಗೂ ಮುಖ್ಯ ಬೇಡಿಕೆಗಳ ಕುರಿತು ಪ್ರಸ್ತಾವಿಕ ಭಾಷಣ ಮಾಡಿದರು. ರೈತ ಸಂಘದ ಕಾರ್ಯದರ್ಶಿ ಕಾ॥ ಯು. ದಾಸ ಭಂಡಾರಿ, ಹಂಚಿನ ಮಜೂರರ ಸಂಘದ ಕಾರ್ಯದರ್ಶಿ ಕಾ॥ ಸಿ. ನಾರಾಯಣ ಮತ್ತು ದ. ಕ. ಜಿಲ್ಲಾ ರೈತ ಸಂಘ ಕಾರ್ಯದರ್ಶಿ ಕಾ॥ ಅಬ್ರಹಾಂ ಕರ್ಕಡ ರವರು ಶುಭಕೋರಿ ಮಾತನಾಡಿದರು.

ಬೀಡಿ ಕಾರ್ಮಿಕರ ಕನಿಷ್ಟ ಕೂಲಿಯಲ್ಲಿ ಕಡಿತ ಮಾಡಿ,690 ಪಾಯಿಂಟ್ ಮೇಲಿನ ಹೆಚ್ಚಳಕ್ಕೆ ಮಾತ್ರ ತುಟ್ಟಿ ಭತ್ತೆ ನೀಡಲಾಗುವುದೆಂದು ಪ್ರಕಟಿಸಿ ರಾಜ್ಯ ಸರ್ಕಾರ ಬೀಡಿ ಕಾರ್ಮಿಕರಿಗೆ ಎಸಗಿದ ಅನ್ಯಾಯ ಪ್ರತಿಭಟಿಸುವ ನಿರ್ಣಯ ಕೈಗೊಳ್ಳಲಾಯಿತು. ಶೇ. 20 ಬೋನಸ್ಸು ಭವಿಷ್ಯ ನಿಧಿ, ಮುಂತಾದ ಬೇಡಿಕೆಗಾಗಿ ನಡೆಯುವ ರಾಷ್ಟ್ರ ವ್ಯಾಪಿ ಹೋರಾಟ ಯಶಸ್ವಿಗೊಳಿಸಲು ಕರೆ ನೀಡಲಾಯಿತು. ಕಾ॥ ಶಂಕರ್ ರವರು ಬೀಡಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆ ಕುರಿತು ಮಾತನಾಡಿ ಸಂಘಟನೆ ಬಲಿಷ್ಟವಾಗಿ ಬೆಳೆಸುವ ಅಗತ್ಯ ಮತ್ತು ಹೋರಾಟ ನಡೆಸಲು ಕರೆ ನೀಡಿದರು.

ತುಮಕೂರಿನಲ್ಲಿ ಸಂತಾಪ ಸಭೆ

ಭಾರತದಲ್ಲಿ ದುಡಿಯುವ ವರ್ಗದ ಏಳಿಗೆಗಾಗಿ ಜೀವನಾದ್ಯಂತ ದುಡಿದು ತಾ॥ 15-12-87 ರಂದು ಮದರಾಸಿನಲ್ಲಿ ನಿಧನ ಹೊಂದಿದ ಕಾಂ॥ ಪಿ.ರಾಮಮೂರ್ತಿಯವರ ನಿಧನದ ಬಗ್ಗೆ ಸಂತಾಪ ಸೂಚಿಸಲು ತುಮಕೂರಿನ ಪುರಭವನದ ಮುಂಭಾಗದಲ್ಲಿ ತಾ॥ 16 ರಂದು 6 ಗಂಟೆಗೆ ಸಭೆ ಸೇರಿ ಸಂತಾಪ ಸೂಚಕ ನಿರ್ಣಯ ಕೈಗೊಳ್ಳಲಾಯಿತು.

ತುಮಕೂರು ಜಿಲ್ಲಾ ತಾಂತ್ರಿಕ ಸಂಸ್ಥೆಗಳ ಬೋಧಕೇತರ ನೌಕರರ ಸಂಘ, ತುಮಕೂರು ಜಿಲ್ಲಾ ಬೀಡಿ ಕಾರ್ಮಿಕರ ಸಂಘ, ತುಮಕೂರುಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ಜಿಲ್ಲಾ ರೈತ ಸಂಘ, ಡಿ.ವೈ.ಎಫ್.ಐ. ಎಸ್. ಎಫ್. ಐ. ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿದ್ದರು. ಈ ಸಭೆಯನ್ನು ಉದ್ದೇಶಿಸಿ ಕಾರ್ಮಿಕ ಮುಖಂಡ ಕಾಂ॥ ಟಿ. ಕೆ. ಗೋವಿಂದ ರಾಜುರವರುಗಳು ಕಾ॥ ಪಿ. ರಾಮಮೂರ್ತಿಯವರ ಜೀವನದ ಮಹತ್ವಪೂರ್ಣ ಕೊಡುಗೆಗಳ ಬಗ್ಗೆ ಮಾತನಾಡಿದರು. ನಂತರ ಎರಡು ನಿಮಿಷ ಮೌನ ಆಚರಿಸಿ ಸಂತಾಪ ಸೂಚಿಸಲಾಯಿತು.

ಗುಲ್ಬರ್ಗಾ ಜಿಲ್ಲಾ ಸಮಿತಿ ಶ್ರದ್ಧಾಂಜಲಿ

ಕಾ॥ ಪಿ. ರಾಮಮೂರ್ತಿಯವರ ನಿಧನಕ್ಕಾಗಿ ಗುಲಬರ್ಗಾ ಜಿಲ್ಲಾ ಸಮಿತಿಯು ದಿ॥ 16 ರಂದು 8 ಗಂಟೆಗೆ ಸಂತಾಪ ಸೂಚಕ ಸಭೆ ನಡೆಸಿ ಅವರ ಗೌರವಕ್ಕಾಗಿ 5 ನಿಮಿಷ ಮೌನ ಆಚರಣೆ ಮಾಡಲಾಯಿತು.

ಕಾ॥ ಪಿ. ರಾಮಮೂರ್ತಿಯವರು ತ್ಯಾಗ ಜೀವಿಯಾಗಿ ಜನತೆ ಸಮಸ್ಯೆಗಳಿಗಾಗಿ ಅವರ ಜೀವನದಲ್ಲಿ 60 ವರ್ಷ ಎಡೆಬಿಡದೆ ಕೆಲಸ ಮಾಡಿ ಪಕ್ಷವನ್ನು ಕಟ್ಟಿ ಬೆಳೆಸಿದ್ದಾರೆ ಎಂದು ಸಂತಾಪ ಸೂಚಕ ಸಭೆಯಲ್ಲಿ ಸ್ಮರಿಸಲಾಯಿತು.

ಎಡಪಕ್ಷಗಳ ಕಾರ್ಯಕ್ರಮ ಜನತೆಯ ಕಾರ್ಯಕ್ರಮ

ಕಾಂ. ವಿ. ಜೆ. ಕೆ. ನಾಯರ್

ಮಜ್ದೂರ್ ಕಿಸಾನ್ ಜಾಥಾಗಳು ದೆಹಲಿಯಲ್ಲಿ ಕೊನೆಯಾಗಿ ರೂಪುಗೊಂಡ ಬೃಹತ್ ಜಾಥಾ ಈಗ ತಾನೇ ಮುಗಿದಿದೆ. ನಾವು ಈ ಸಬ್ ಜಾಥಾಗಳಲ್ಲಿ ಮತ್ತು ನಂತರದ ಬೃಹತ್ ರ್‍ಯಾಲಿಯಲ್ಲಿ ಪಾಲುಗೊಂಡಿದ್ದೆವು. ಈ ಜಾಥಾಗಳು ಹಾಗೂ ರ್‍ಯಾಲಿಗಳು ನಮ್ಮಲ್ಲಿ ಜನ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಎಂತಹ ಅನುಭವ ಹಾಗೂ ಒಳನೋಟವನ್ನು ಅರಿವನ್ನು ಮೂಡಿಸಿವೆಯೆಂದರೆ– ಈ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಸಮಾಜ ಬದಲಾವಣೆಯ ತುಡಿತದಲ್ಲಿ ಮಾತ್ರವೇ ಈ ಮಹಾನ್ ದೇಶದ ಜನರನ್ನು ಒಳಗೊಳ್ಳಬಹುದು ಮತ್ತು ಒಳಗೊಳ್ಳಲಾಗುತ್ತಿದೆ.

ಒಂದು ತಿಂಗಳ ಕಾಲದ ಚಳುವಳಿ, ನಮ್ಮ ರಾಜ್ಯದಲ್ಲಿ ನಡೆದ ರಾಜಕೀಯ ಸಮಾವೇಶಗಳು, ಸಬ್ ಜಾಥಾಗಳು ಅಖಿಲ ಭಾರತ ಜಾಥಾಗಳು, ಈ ಎಲ್ಲದರಲ್ಲಿ ನಡೆದ ನೂರಾರು ಸಾವಿರಾರು ಬಹಿರಂಗ ಸಭೆಗಳು ಮತ್ತು ಡಿಸೆಂಬರ್ 9 ರಂದು ದೆಹಲಿಯಲ್ಲಿ ಜರುಗಿದ ಒಂದು ದಶಲಕ್ಷ ಜನರ ಸಭೆ ಮಹಾಸಭೆ ಇವೆಲ್ಲವುಗಳ ಮೂಲಕ ಹೊಸ ಘಟ್ಟವೊಂದು ಈಗ ತಾನೆ ಆರಂಭವಾಗುತ್ತಿದೆಯಷ್ಟೇ.

ನಾಲ್ಕು ಎಡ ಪಕ್ಷಗಳ ನೇತೃತ್ವದ 24 ಸಾಮೂಹಿಕ ಸಂಘಟನೆಗಳ ಅಖಿಲ ಭಾರತ ಚಳುವಳಿ ಸಮಿತಿ ಹಾಗೂ ಅದರ ರಾಜ್ಯ ಹಾಗೂ ಜಿಲ್ಲಾ ಘಟಕಗಳು "ಒಂದು ಬೃಹತ್ ಕಾರ್ಯಕ್ರಮವನ್ನು ಸಂಘಟಿಸಿ ಜಯಶೀಲರಾದೆವು ಇನ್ನು ಆರಾಮತೆಗೆದುಕೊಳ್ಳಬಹುದು" ಎನ್ನುವುದು ಸಾಧ್ಯವಿಲ್ಲ. ಏಕೆಂದರೆ ಇದು ನಮಗೆ ಜನತೆಯ ಪರವಾಗಿ ರಾಜಕೀಯ ಶಕ್ತಿಗಳ ಸಮತೋಲನವನ್ನು ಬದಲಾಯಿಸುವ ಜನರ ಸಾಮಾಜಿಕ, ಜನವಾದಿ ಹಕ್ಕುಗಳನ್ನು ರಕ್ಷಿಸುವ ಅದನ್ನು ಬೆಳೆಸುವ ಅಖಿಲ ಭಾರತ ವ್ಯಾಪಿಯಾದ ಕ್ರಿಯಾಶೀಲ ಕಾರ್ಯಕ್ರಮವೊಂದರ ಆರಂಭ ಮಾತ್ರ. ಆದ್ದರಿಂದಲೇ ಈ ಅಖಿಲ ಭಾರತ ಚಳುವಳಿ ಸಮಿತಿ ಒಂದು ಭಾರತ್ ಬಂದ್ ಕರೆಯನ್ನೇ ನೀಡಿದೆ. ಇತರ ಜಾತ್ಯಾತೀತ ಪ್ರಜಾಸತ್ತಾತ್ಮಕ ಶಕ್ತಿಗಳೊಂದಿಗೆ ಸಮಾಲೋಚಿಸಿ ಭಾರತ ಬಂದ್ ದಿನಾಂಕವನ್ನು ನಿಗದಿಗೊಳಿಸಲಾಗುವುದು. ಈ ಸವಾಲನ್ನೆದುರಿಸಲು, ಮುಂದಿನ ಹಂತದ ಬಂದ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ನಾವು ಈಗ ನಮ್ಮ ಪ್ರಯತ್ನಗಳನ್ನು ಇಮ್ಮಡಿ ಹೆಚ್ಚಿಸಬೇಕಾಗಿದೆ. ದೆಹಲಿ ಸಭೆ ನಡೆದ ತಕ್ಷಣ ಲೋಕಸಭೆಯಲ್ಲಿ ರಾಜೀವ ಗಾಂಧಿಯವರು ತೋರಿಸಿದ ಕೋಪ, ಅವರಾಗಲೀ ಅವರು ಪ್ರತಿನಿಧಿಸುವ ಆಳುವ ವರ್ಗವಾಗಲೀ ಈ ಚಳುವಳಿಯಿಂದ ಉದಿಸಿದ ಹಾಗೂ ಉದಿಸುವ ಅಪಾರ ಜನಶಕ್ತಿಯನ್ನು ಕಡೆಗಣಿಸಲು ಸಾಧ್ಯವಿಲ್ಲ. ಆದುದರಿಂದಲೇ ಎಡ ಶಕ್ತಿಗಳ ಬಗ್ಗೆ ಅವರು ಎಲ್ಲಾ ರೀತಿಯಲ್ಲಿ ಅವಹೇಳನ ಮಾಡಲು, ಸಮಾಜವಾದೀ ದೇಶಗಳ ಬೆಳವಣಿಗೆಯನ್ನು ತಿರುಚಲು ಪ್ರಯತ್ನಿಸಿದ್ದು. ಕಾಂಗ್ರೆಸ್ಸೇತರ ಸರಕಾರಗಳಿಗೆ ವಜಾ ಮಾಡುವ ಬೆದರಿಕೆ ಹಾಕಿದ್ದು. ಅವರ ಹಿಡಿತದಲ್ಲಿರುವ ಎಲ್ಲಾ ಶಕ್ತಿಗಳು ಮುಂದಿನ ಬೆಳವಣಿಗೆಯನ್ನು ಭಾರತ ಬಂದ್ ಕಾರ್ಯಕ್ರಮವನ್ನು ತಡೆಯಲು ಒಡೆಯಲು ಪ್ರಯತ್ನಿಸುತ್ತಾರೆನ್ನುವುದಂತೂ ಖಚಿತ. ಆದುದರಿಂದಲೇ ನಾವು ಜನ ಸಮುದಾಯದ ಮಧ್ಯೆ ಆಳವಾಗಿ ಪ್ರವೇಶಿಸಲು, ಈಗಾಗಲೇ ಸಾಧಿಸಿದ ಐಕ್ಯತೆಯನ್ನು ಉಳಿಸಿಕೊಳ್ಳಲು ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಳಗೊಂಡುಬೆಳೆಸಲು ಎಲ್ಲಾ ಪ್ರಯತ್ನ ಮಾಡಬೇಕು.

ನವಂಬರ್ 15 ರಂದು ಸಿಂಧಗಿಯಿಂದ ಆರಂಭವಾಗಿ ನವಂಬರ್ 20 ರಂದು ಬೆಂಗಳೂರಿನಲ್ಲಿ ಮುಖ್ಯ ಜಾಥಾವನ್ನು ಸೇರಿದ ಉಪಜಾಥಾದ ಆದ್ಯಂತವಾಗಿ ಭಾಗವಹಿಸುವ ಅವಕಾಶ ನನಗೆ ದೊರೆಯಿತು. ಈ ಜಾಥಾದ ಇತರ ಗಮನಾರ್ಹ ಸದಸ್ಯರೆಂದರೆ ಎ.ಐ.ಟಿ.ಯು.ಸಿ. ಮುಖಂಡ ಹಾಗೂ ಸಿ.ಪಿ.ಐ. ರಾಜ್ಯ ಕಾರ್ಯದರ್ಶಿ ಕಾಂ. ಎಂ.ಎಸ್.ಕೃಷ್ಣನ್, ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷ ಮತ್ತು ಬಿಜಾಪುರ ಜಿಲ್ಲಾ ಅಧ್ಯಕ್ಷ ಕಾ. ಭೀಮಸಿ ಕಲಾದಗಿ, ಎಸ್.ಎಫ್.ಐ ರಾಜ್ಯ ಅಧ್ಯಕ್ಷ ಕಾಂ. ಜಯಕುಮಾರ್, ಎ.ಐ.ಎಸ್.ಎಫ್. ರಾಜ್ಯ ಅಧ್ಯಕ್ಷ ಸಿದ್ದನಗೌಡ ಪಾಟೀಲ ಮತ್ತು ನಮ್ಮ ಜತೆ ಕೆಲಸಮಾಡುತ್ತಿರುವ ಕಾಂ. ಕೃಷ್ಣ ಕಟ್ಟ–ಅಲ್ಲದೆ ಪ್ರತಿಯೊಂದು ಜಿಲ್ಲೆಯಲ್ಲಿ ನಮ್ಮ ಜತೆ ಗೂಡಿದ್ದ ಮುಖಂಡರು.

ಜಾಥಾದಲ್ಲಿ ನಾವು ಕಂಡ ಜನ, ಅವರು ತಿಳಿಸಿದ ಸಮಸ್ಯೆಗಳನ್ನು ಕೇಳಿದ ಮೇಲೆ ಆಂದೋಳನ ಸಮಿತಿ ಮುಂದಿಟ್ಟ 17 ಬೇಡಿಕೆಗಳೆಲ್ಲಾ ಸಂಪೂರ್ಣವಾಗಿ ಜನತೆಗೆ ಅತ್ಯಂತ ಅವಶ್ಯಕವಾದವುಗಳು ಎಂದು ನಾನು ಖಂಡಿತವಾಗಿ ಹೇಳಬಲ್ಲೆ. ಅವುಗಳಲ್ಲಿ ಯಾವುದೂ ಕೇವಲ ಕಪೋಲಕಲ್ಪಿತವಲ್ಲ ಅಥವಾ ಸರ್ಕಾರವನ್ನು ಸುಮ್ಮನೆ ಮುಜುಗರ ಪಡಿಸಲು ಸೃಷ್ಟಿಸಿದವುಗಳಲ್ಲ. ರಾಜೀವ್‌ಗಾಂಧಿ ಏಕೆ ರಾಜಿನಾಮೆ ಕೊಡಬೇಕು ಎಂದು ಕೇಳಿದ ಕೆಲವರಿಗೆ ಅವರು ಈ ಬೇಡಿಕೆಗಳನ್ನು ಈಡೇರಿಸಿದರೆ ರಾಜಿನಾಮೆ ಕೊಡಬೇಕಾಗಿಲ್ಲ ಎಂದು ಉತ್ತರಿಸಿದೆವು. ಸಂಸತ್ತಿನಲ್ಲಿ ಡಿಸೆಂಬರ್ 11ರಂದುಎಡ ಪಕ್ಷಗಳಿಗೆ ಕಾರ್ಯಕ್ರಮವಿಲ್ಲ ಅವರು ಕೇವಲ ವ್ಯಕ್ತಿಗಳನ್ನು ದೂಷಿಸುತ್ತಾರೆ ಎಂಬ ರಾಜೀವ್‌ಗಾಂಧಿ ವಿಕೃತ ಮಾತುಗಳ ಬಗ್ಗೆ ಇಷ್ಟು ಹೇಳಿದರೆ ಸಾಕು. ಜಾಥಾದಲ್ಲಿ ಬಂದಿದ್ದ ನಮಗ್ಯಾರಿಗೂ ಅವರ ಬಗ್ಗೆ ದುರ್ಭಾವನೆಯಿಲ್ಲ. ಯಾಕೆಂದರೆ ಅವರ ಸ್ಥಾನದಲ್ಲಿ ಬೇರೆ ಯಾರೇ ಇದ್ದರೂ ಇದಕ್ಕಿಂತ ಭಿನ್ನವಾಗಿ ವರ್ತಿಸಲು ಸಾಧ್ಯವಿಲ್ಲ ಎಂದು ನಮಗೆ ಗೊತ್ತಿದೆ.

ಆಗಲಷ್ಟೇ ವಿಪುಲ ಮಳೆ ಕಂಡು ನೆಮ್ಮದಿಯಿಂದ ಉಸಿರಾಡಲಾರಂಭಿಸಿದ ರೈತರನ್ನು ನಾವು ಕಂಡೆವು. ಪರಿಸ್ಥಿತಿ ಮತ್ತೊಮ್ಮೆ ಹದಗೆಡದಿರಲಪ್ಪಾ ಎಂದು ಅವರು ಪ್ರಾರ್ಥಿಸಿಕೊಳ್ಳಬಲ್ಲರಷ್ಟೆ. ಹೇಗೆ ಮೇಲ್ಮಟ್ಟದ ತಂತ್ರಜ್ಞಾನ, ನೀರಾವರಿ, ವಿದ್ಯುತ್ ಹಾಗೂ ಆಧುನಿಕ ರಸಗೊಬ್ಬರಗಳು ಇತ್ಯಾದಿ ಕೈಗೆಟುಕದ್ದರಿಂದಾಗಿ ಈ ನತದೃಷ್ಟರು ಪ್ರಕೃತಿಯ ಬಂದಿಗಳಾಗಿದ್ದಾರೆ ! ಭೂಮಿಯಂತೂ ಕಾಂಗ್ರೆಸ್ ಆಳ್ವಿಕೆಯಲ್ಲಿ, ನಲ್ವತ್ತು ವರ್ಷಗಳ ಭೂಸುಧಾರಣಾ ಶಾಸನಗಳ ನಡುವೆ ಕೇವಲ ಕನಸಿನ ಗಂಟಾಗಿಯೇ ಉಳಿದಿದೆ. ನಾವು ಹಾದು ಬಂದ ಬಿಜಾಪುರದ ಹಳ್ಳಿಗಳು ಇನ್ನೂ ಪಾಳೆಯಗಾರೀ ಹಿಡಿತದ ಅಂಧಕಾರದಲ್ಲಿ ತಡಕಾಡುತ್ತಿವೆ. ಪ್ರಜಾಪ್ರಭುತ್ವ, ಸಮಾಜವಾದದ ಬೆಳಕು ಅವರಿಗೆ ಇನ್ನೂ ದೂರವೇ ಇದ್ದಂತಿದೆ. ಪ್ರಕೃತಿಯ, ಯುಗ–ಯುಗಗಳಿಂದ ವಂಚನೆಯ ವ್ಯವಸ್ಥೆಯೊಳಗೆ ಬಂಧಿತರಾದ ಜನ ಇವರು.

ರಾಜೀವ್‌ಗಾಂಧಿಯ ವೈಯಕ್ತಿಕ ಹಿತಾಸಕ್ತಿಗಳು ಈ ಕೋಟೆಗಟ್ಟಲೆ ಜನಗಳ ವೈಯಕ್ತಿಕ ಹಿತಾಸಕ್ತಿಗಳನ್ನು ತುಳಿದುಹಾಕಿವೆ. ಹುಚ್ಚರು ಅಥವಾ ವಾಸ್ತವತೆಗೆ ಕುರುಡಾದವರು ಮಾತ್ರವೇ ಎಡಪಕ್ಷಗಳ ಬೇಡಿಕೆಗಳಲ್ಲಿ ಕಾರ್ಯಕ್ರಮವೆಂಬುದಿಲ್ಲ, ಅದು ಕೇವಲ ತನ್ನ ವಿರುದ್ಧ ವೈಯಕ್ತಿಕ ದೂಷಣೆ ಎನ್ನಬಲ್ಲರು.

ಮುಚ್ಚಿದ ಕಾರ್ಖಾನೆಗಳು

ನೆಹರೂ ಕುಟುಂಬ ಯಾರ ಹೆಸರಿನಲ್ಲಿ ಈ ದೇಶವನ್ನಾಳುತ್ತಾ ಬಂದಿದೆಯೋ ಮತ್ತು ಆ ಕೃಷಿ ಕಾರ್ಮಿಕರನ್ನು ನಾವುಕಂಡೆವು ಸರ್ಕಾರೀ ಭೂಮಿಯನ್ನು ಆಕ್ರಮಿಸಿಕೊಂಡಿದ್ದರೂ, ಸರ್ಕಾರ ಅವರಿಗೆ ಆ ಜಮೀನಿನ ಪಟ್ಟಾ ಕೊಡದ್ದರಿಂದ ವಿದ್ಯುತ್ ಪಡೆಯಲು ಅವರಿಗೆ ಸಾಧ್ಯವಾಗಿಲ್ಲ. ದೊರೆತಿದ್ದರ ಗಲಗಟ್ಟಿ ಗ್ರಾಮದ ಬಳಿ ಕೃಷ್ಣಾ ನದಿ ಅಣೆಕಟ್ಟಿನಿಂದ ನೀರು ಉಣ್ಣಿಸಿ ಅದನ್ನು ಫಲವತ್ತುಗೊಳಿಸಬಹುದಾಗಿತ್ತು. 600ಕ್ಕೂ ಹೆಚ್ಚು ಜನರಿರುವ ಈ ಕೃಷಿ ಕಾರ್ಮಿಕರ ಕುಟುಂಬಗಳದ್ದು ಸಮೃದ್ಧಿಯ ನಡುವೆ ದಾರಿದ್ರ್ಯದ ಒಂದು ದೃಶ್ಯ. ಇವರು ರಾತ್ರಿ 9–30ರವರೆಗೂ ನಮಗಾಗಿ ಕಾಯುತ್ತಿದ್ದರು.

ಬನಹಟ್ಟಿ-ರಬಕವಿಯಲ್ಲಿ ನಾವು ಕೈಮಗ್ಗ ಕಾರ್ಮಿಕರನ್ನು ಕಂಡೆವು. ನೂಲಿನ ಪೂರೈಕೆಯಿಲ್ಲದೆ ? ತಮ್ಮ ಮಗ್ಗಗಳು ಸ್ತಬ್ಧವಾಗಿವೆ ಎಂದರು ಅವರು. ಅದೇ ಜಿಲ್ಲೆಯಲ್ಲಿ ಎರಡು ಕಡೆ-ಬಿಜಾಪುರ ಮತ್ತು ಬಾಗಲಕೋಟೆಯಲ್ಲಿ ಎರಡು ನೂಲುವ ಗಿರಣಿಗಳು ಮುಚ್ಚಿವೆ. ಎರಡು ದಿನಗಳ ನಂತರವಷ್ಟೆ ನಾವು ದಾವಣಗೆರೆಯಲ್ಲಿ ಬಟ್ಟೆ ಗಿರಣಿ ಕಾರ್ಮಿಕರನ್ನು ಕಂಡೆವು. ಅವರ ಗಿರಣಿ ಮುಚ್ಚಿವೆ. ಅವರು ನಿರುದ್ಯೋಗಿಗಳಾಗಿದ್ದಾರೆ. ದಾವಣಗೆರೆಯಲ್ಲಿ 4 ಗಿರಣಿಗಳು ಮುಚ್ಚಿವೆ ಅತ್ತನಂದಿಹರ್ಬಿಮಿಲ್ಸ್ ನಡೆಯುತ್ತಿದೆ, ಕಾರ್ಮಿಕರು ಕೆಲಸಕ್ಕೆ ಹಾಜರಾಗುತ್ತಿದ್ದಾರೆ. ಆದರೆ ಸಂಬಳ ಸಿಗುತ್ತಿಲ್ಲ.

ಅತ್ಯಂತ ಮನ ಕರಗಿಸುವ ದೃಶ್ಯ ನಾವು ಕಂಡದ್ದು ಹಿರಿಯೂರಿನ ವಾಣಿ ವಿಲಾಸ್ ಸಕ್ಕರೆ ಕಾರ್ಖಾನೆಯೆದುರು. ಸುಮಾರು 50 ಮಕ್ಕಳು ತಮ್ಮ ತಾಯಂದಿರ ಬಳಿ ನಿಂತಿದ್ದವು. ನಮ್ಮ ಪೋಷಕರ ಕಾರ್ಖಾನೆಯನ್ನು ತೆರೆಸಿ ನಮಗೆ ತಿನ್ನಲು ಏನಾದರೂ ಸಿಗುವಂತೆ ಮಾಡಿ ಎಂದು ಅವರು ಅಂಗಲಾಚಿದರು.

ವಂಚಿತ ಜನತೆ

ಈ ನತದೃಷ್ಟ ಜನತೆ, ವಾಣಿ ವಿಲಾಸ್ ಕಾರ್ಖಾನೆಯ ಎದುರು ನಿಂತಿದ್ದ ಹಾಗೂ ಇತರೆಡೆಗಳಲ್ಲಿನ ಮಕ್ಕಳು ತಮ್ಮ ವೈಯಕ್ತಿಕ ಹಿತಾಸಕ್ತಿಗಳನ್ನು ಕಾಪಾಡಿ ಎಂದಾಗಲೆಲ್ಲಾ ಹಿಂದಕ್ಕೆ ಇಂದಿರಾಗಾಂಧಿ, ಈಗ ರಾಜೀವ್ ಗಾಂಧಿ ತಮ್ಮ ವ್ಯಕ್ತಿತ್ವವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಿದ್ದಾರೆ ಹೌದು. ರಾಜೀವ್‌ಗಾಂಧಿಯ ವೈಯಕ್ತಿಕ ಹಿತಾಸಕ್ತಿಗಳು ಈ ಕೋಟಿಗಟ್ಟಲೆ ಜನಗಳ ವೈಯಕ್ತಿಕ ಹಿತಾಸಕ್ತಿಗಳನ್ನು ತುಳಿದು ಹಾಕಿವೆ. ಹುಚ್ಚರು ಅಥವಾ ವಾಸ್ತವತೆಗೆ ಕುರುಡಾದವರು ಮಾತ್ರವೇ ಎಡ ಪಕ್ಷಗಳ ಬೇಡಿಕೆಗಳಲ್ಲಿ ಕಾರ್ಯಕ್ರಮವೆಂಬುದಿಲ್ಲ, ಅದು ಕೇವಲ ತನ್ನ ವಿರುದ್ಧ ವೈಯಕ್ತಿಕ ದೂಷಣೆ ಎನ್ನ ಬಲ್ಲರು.

ದಾವಣಗೆರೆ, ಹಿರಿಯೂರಿನ ಮುಚ್ಚಿದ ಕಾರ್ಖಾನೆಗಳಿರುವ ಚಿತ್ರದುರ್ಗ ಜಿಲ್ಲೆಯನ್ನೂ ಪ್ರವೇಶಿಸುವ ಮೊದಲು ಧಾರವಾಡ ಜಿಲ್ಲೆಯಲ್ಲಿ ಹೋಗುತ್ತಿದ್ದಾಗ ಹೆದ್ದಾರಿಯ ಬಳಿ ನಾಗನೂರಿನ ಹಳ್ಳಿಗರು ನಮ್ಮನ್ನು ತಡೆದು ನಿಲ್ಲಿಸಿ ಒಂದು ಮನವಿ ಪತ್ರ ಸಲ್ಲಿಸಿದರು. ಜನಾರ್ಧನ ಪೂಜಾರಿ ಶೈಲಿಯ ಬ್ಯಾಂಕ್ ಸಾಲ ಕೊಡಿಸುವುದಾಗಿ ಹೇಳಿ ತಮ್ಮಲ್ಲಿ ಹಲವರನ್ನು ಕುಟುಂಬ ಯೋಜನಾ ಶಸ್ತ್ರ ಚಿಕಿತ್ಸೆಗೊಳಪಡಿಸಲಾಯಿತು. ಆದರೆ ನಂತರ ಮೋಸ ಮಾಡಲಾಯಿತಷ್ಟೆ, ಡಾಕ್ಟರರು ತಮ್ಮ ಕೋಟಾ ಮುಗಿಸಿದರು. ಹಾಗೂ ಬ್ಯಾಂಕ್ ಮ್ಯಾನೇಜರ್ ಸಾಲ ಕೊಟ್ಟದ್ದು ಬೇರೆ ಯಾರಿಗೋ ಎಂದು ಆ ಮನವಿ ಪತ್ರದಲ್ಲಿ ಅವರು ತಿಳಿಸಿದ್ದರು.

ಹಾವೇರಿಯಲ್ಲಿ ನೂರಾರು ಮಹಿಳೆಯರು ಹತ್ತಾರು ವರ್ಷಗಳಿಂದ ತಾವು ಉಳುತ್ತಿದ್ದ ಬಂಜರು ಭೂಮಿಯಿಂದ ತಮ್ಮನ್ನು ಎಬ್ಬಿಸಲಾಗುತ್ತಿದೆ ಎಂದು ದೂರು ನೀಡಿದರು. ಅವರಲೊಬ್ಬ ವಯೋವೃದ್ಧೆ "ಸತ್ತ ಮೇಲೆ ಆರಡಿ ಜಮೀನು ಪಡೆಯುವ ನಮಗೆ ಬದುಕಿರುವಾಗಲೇ ಆ ಜಮೀನನ್ನು ಏಕೆ ಕೊಡಬಾರದು ?" ಎಂದು ಪ್ರಶ್ನಿಸಿದಳು. ಅಧ್ಯಯನದಿಂದ ನಮಗೆ ದೊರಕಿದ್ದು ಆಕೆಗೆ ಅನುಭವದಿಂದ ದೊರಕಿತ್ತು.

ಹೊಸ ಹುಮ್ಮಸ್ಸು

ದಾರಿ ಯುದ್ಧಕ್ಕೂ ನೂರಾರು ಮೈಲಿ ನಡೆದು ಬಂದ ಕಾರ್ಮಿಕರು (ಉದಾಹರಣೆಗೆ ಹುಬ್ಬಳಿಗೆ ದಾಂಡೇಲಿಯಿಂದ ಬಂದವರು), ಹುಬ್ಬಳ್ಳಿ, ಹರಿಹರ, ದಾವಣಗೆರೆ, ಚಿತ್ರದುರ್ಗ, ಹಿರಿಯೂರಿನಲ್ಲಿ ನಾಲ್ಕೈದು ಗಂಟೆಗಳ ಕಾಲ ಸಹನೆಯಿಂದ ಕಾಯುತ್ತಿದ್ದ ಕಾರ್ಮಿಕರು ನಮ್ಮನ್ನು ಎದುರುಗೊಂಡರು. ಸವದತ್ತಿಯಲ್ಲಿ ಪಾರಂಪರಿಕ ವಾದ್ಯಗಳೊಂದಿಗೆ ರೈತರು ನಮ್ಮನ್ನು ಎದುರುಗೊಂಡರು. ಕೆಲವೆಡೆ ಆಧುನಿಕ ಬ್ಯಾಂಡುಗಳಿಂದ ಕೂಡಾ.

ಅಂತ್ಯದಲ್ಲಿ, ಬೆಂಗಳೂರು ಪ್ರವೇಶಿಸಿದಾಗ ಇಲ್ಲಿನ ಕಾರ್ಮಿಕರ ಅಮಿತೋತ್ಸಾಹ ಹೊಸ ತಿರುವು ಪಡೆದಿತ್ತು. ಕಬ್ಬನ್ ಪಾರ್ಕ್ ಸಮೀಪಿಸುತ್ತಿದ್ದಂತೆ ನಮ್ಮನ್ನು, ನಮಗಿಂತ ಹೆಚ್ಚಾಗಿ ಅಖಿಲ ಭಾರತ ಜಾಥಾವನ್ನು ಸ್ವಾಗತಿಸಲು ಸೇರಿದ್ದ ಸಾವಿರಾರು ಮಂದಿ ದೈಹಿಕವಾಗಿ ವಿಪರೀತವಾಗಿ ದಣಿದಿದ್ದರೂ ನಮಗೆ ಹೊಸ ಶಕ್ತಿ ನೀಡಿದರು. ಅವರಅಮಿತೋತ್ಸಾಹ ಆದಾಗಲೇ ಗುಲ್ಬರ್ಗಾ ಜಾಥಾದಲ್ಲಿ ಒಂದು ವಾರ ಕಾಲ ಪ್ರಯಾಣ ಮಾಡಿದ್ದ ಇಬ್ಬರು ಸಂಗಾತಿಗಳಿಗೆ ಕಾ|| ಬಾಳೆ ಹಾಗೂ ಕಾ||ಮಾನೂರವರಿಗೆದಿಲ್ಲಿಯತ್ತ ಮುಂದುವರಿಯುವ ಹುಮ್ಮಸ್ಸು ತುಂಬಿತು. ಈ ಇಬ್ಬರು ಸಂಗಾತಿಗಳು ಸಾವಿರಾರು ಮೈಲು ಪ್ರಯಾಣ ಮಾಡಿ ವಿವಿಧ ರೀತಿಯ ಜನಗಳನ್ನು ಭೇಟಿಯಾಗುತ್ತಾ ದೆಹಲಿ ತಲುಪಿದರು. ಎಡ ಪಕ್ಷಗಳ ಕಾರ್ಯಕ್ರಮ ಜನತೆಯ ಕಾರ್ಯಕ್ರಮ ಎಂದು ಇವೆಲ್ಲಾ ತೋರಿಸಿ ಕೊಟ್ಟವೆ.

ಡಿಸೆಂಬರ್ 9, 1987

9 ರಂದು ದೆಹಲಿ ತಲುಪುವ ಮೊದಲು ಚಂಡೀಗಡ ಹಾಗೂ ಪಂಜಾಬ್‌ನಲ್ಲಿ ನಮ್ಮ ಸಂಗಾತಿಗಳು ರಾಷ್ಟ್ರೀಯ ಸಮಗ್ರತೆಗಾಗಿ ಗಂಭೀರ ಹೋರಾಟ ನಡೆಸಿದ್ದರ ಫಲಿತಾಂಶ ನೋಡಿ ಬಂದಿದ್ದೆ. ಹುತಾತ್ಮರ— ಸುಪ್ರಸಿದ್ಧ ಹಾಗೂ ಉದಯೋನ್ಮುಖ ಹೆಸರುಗಳನ್ನು ಉಚ್ಚರಿಸಿದಾಗ, ಅವರ ಚಿತ್ರ ನೋಡಿದಾಗಲೆಲ್ಲಾ ಕಣ್ಣೀರು ಹರಿದು ಬಂತು. ನೂರಾರು ಸಶಸ್ತ್ರ ಸ್ವಯಂ ಸೇವಕರು ನಮ್ಮನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಿದ್ದಾಗ, ಚಂಡೀಗಡದಲ್ಲಿ ಸಭೆ ಸೇರಿದ್ದ ಸಾವಿರಾರು ಜನ "ದೇಶಕೀ ರಕ್ಷಾ ಕೌನ್‌ಕರೇಗಾ" ಎಂಬ ಪ್ರಶ್ನೆಗೆ "ಹಂಕರೇಂಗೇ" ಎಂದು ಬಿಗಿ ಮುಷ್ಟಿಯೆತ್ತಿ ಘೋಷಿಸುವುದನ್ನು, ನಮ್ಮ ಹೃದಯ ದೃಢತೆಯಿಂದ ತುಂಬಿತ್ತು—ನಮ್ಮ ಪಕ್ಷ, ಎಡ ಆಂದೋಲನ ಈ ಭಾಗದಲ್ಲಿ ದಾಪುಗಾಲಿಟ್ಟು ಮುನ್ನಡೆಯುತ್ತಿದೆ ಎಂದು.

ಡಿಸೆಂಬರ್ 9 ರಂದು ಬೋಟ್ ಕ್ಲಬ್‌ನಲಿ ಒಂದು ಲಕ್ಷಕ್ಕೂ ಹೆಚ್ಚು ಪಂಜಾಬೀ ರೈತರನ್ನು ಕಂಡಾಗ ನನಗೇನೂ ಅಚ್ಚರಿಯೆನಿಸಲಿಲ್ಲ.

ಕೆಂಪು ಕೋಟೆಯ ಬಳಿ ಆ ಬೆಳಗ್ಗೆ ಕರ್ನಾಟಕದ ಸಂಗಾತಿಗಳು ಎಲ್ಲಿರಬಹುದೆಂದು ಹುಡುಕಲು ನಾನು ಸಾವಿರಾರು ಮಂದಿಯ ನಡುವೆ ನುಸುಳಿಕೊಂಡು ಹೋಗಬೇಕಾಯಿತು. ಆದರೂ ಪ್ರಯೋಜನವಾಗಲಿಲ್ಲ. ಯಾಕೆಂದರೆ ಗಂಟೆಗಳ ಕಾಲ ಮಧ್ಯಪ್ರದೇಶದ ತುಕಡಿಯಷ್ಟೇ ಬೋಟ್ ಕ್ಲಬ್‌ನತ್ತ ಸಾಗಿರುವುದನ್ನು ಕಾಣಲು ನನಗೆ ಸಾಧ್ಯವಾಯಿತು. ಕೊನೆಗೆ ನನ್ನ ಹುಡುಕಾಟ ನಿಲ್ಲಿಸಿ ಮಧ್ಯ ಪ್ರದೇಶದ ಸಂಗಾತಿಗಳೊಂದಿಗೇ ಸೇರಿಕೊಂಡು ಸಾಗಿದೆ.

ಚಂದಿ ಬಟ್ಟೆಯನ್ನುಟ್ಟು, ಕೆಂಬಾವುಟವನ್ನು ದೇವರಂತೆ ಎತ್ತಿ ಹಿಡಕೊಂಡು, ಇನ್ನೊಂದು ಕೈಯಲ್ಲಿ ಬಿಲ್ಲು ಬಾಣಗಳನ್ನು ಹಿಡಿದು ಆದಿವಾಸಿಗಳು ಸಾಗಿದ್ದರು. ಈ ಜನಕ್ಕೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಶಬ್ದಗಳೇ ಇಲ್ಲ. ಸಂಕಷ್ಟವೇ ಮೂರ್ತಿವೆತ್ತಂತಿದ್ದರು. ಅವರ ದಾರಿದ್ರ್ಯ ಎದ್ದು ಕಾಣುತ್ತಿತ್ತು. ಅಂತೆಯೇ ಅದನ್ನು ತೊಲಗಿಸಬಹುದಾದ ಜತೆಗೆ ನಮ್ಮದನ್ನೂ ತೊಲಗಿಸಬಹುದಾದ ಅವರ ಶಕ್ತಿ ಕೂಡಾ. ನಮ್ಮ ಕಾರ್ಮಿಕರು ಅವರ ಈ ಶಕ್ತಿಯನ್ನು ಅರಿತು ಈ ನತದೃಷ್ಟರ ನೆರವಿಗೆ ಬರುವಂತಿದ್ದರೆ ಎಷ್ಟು ಚೆನ್ನ! ನವ ಭಾರತವೊಂದು 80 ಕೋಟಿ ಜನರ ಅವಶ್ಯಕತೆಗಳನ್ನು ಪೂರೈಸುವ ಭಾರತವೊಂದು ಮೂಡಿಬರಲು ಆಗ ಸಾಧ್ಯವಾಗುತ್ತಿತ್ತು.

ಕೋಟಿಗಟ್ಟಲೆ ನಿರುದ್ಯೋಗಿಗಳ ಪ್ರತಿನಿಧಿಗಳೂ ಈ ಮೆರವಣಿಗೆಯಲ್ಲಿದ್ದರು. ಮಹಿಳೆಯರೂ ಅಪಾರ ಸಂಖ್ಯೆಯಲ್ಲಿದ್ದರು.

ಬೋಟ್ ಕ್ಲಬ್‌ನಲ್ಲಿ ವೇದಿಕೆಯಿಂದ ಹಿಡಿದು ಇಂಡಿಯಾ ಗೇಟ್ ವರೆಗಿನ ಎರಡು ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಜನ ಸಾಗರವಲ್ಲದೆ ಮತ್ತೇನೂ ನಮಗೆ ಕಾಣುತ್ತಿರಲಿಲ್ಲ. ರಾಜೀವ್ ಗಾಂಧಿ ಸಿಟ್ಟಗೆದ್ದದ್ದು, ಸ್ವತಂತ್ರ ಭಾರತದ ಅತಿ ದೊಡ್ಡ ರ್‍ಯಾಲಿ ಇದೆಂದು ಪತ್ರಿಕೆಗಳು ವರದಿ ಮಾಡಿದ್ದು ಸುಮ್ಮನೆಯೇನಲ್ಲ.

ಠರಾವನ್ನು ಮತಕ್ಕೆ ಹಾಕಿದಾಗ ಲಕ್ಷಗಟ್ಟಲೆ ಕೈಗಳು ಮೇಲೆದ್ದವು! ಒಂದು ಶ್ರದ್ಧಾಂಜಲಿ ಠರಾವನ್ನು ಮಂಡಿಸಿದಾಗ ಹತ್ತು ಲಕ್ಷಕ್ಕೂ ಹೆಚ್ಚು ಜನ ಮೌನವಾಗಿ ನಿಂತರು!

ಇದಕ್ಕಿಂತಲೂ ಹೆಚ್ಚು ಜನ ಸೇರಿಸಲು ತನ್ನ ಪಕ್ಷಕ್ಕೆ ಸಾಧ್ಯ ಎಂದು ರಾಜೀವ್‌ಗಾಂಧಿ ಸವಾಲೆಸೆದಿದ್ದಾರೆ. ನಿಜ, ತನ್ನ ಸರ್ಕಾರೀ ಶಕ್ತಿ ಬಳಸಿ ಆತನಿಗೆ ಸಾಧ್ಯವಾಗಬಹುದು. ಆದರೆ ಡಿಸೆಂಬರ್ 9ರ ರ್‍ಯಾಲಿ ಹತ್ತು ಶೇಕಡಾದಷ್ಟೇ ಜನರನ್ನು ಒಟ್ಟುಗೂಡಿಸಿದರೇ ಸಾಕು-ಆತನ ಬಾಡಿಗೆ ಜನಗಳು ವಿಧ್ವಂಸಕ ಮಿಡತೆಗಳಂತೆ,ಶಲಭಗಳಂತೆ ದೆಹಲಿಯ ಮೇಲೆ ಬಂದೆರಗುತ್ತವೆ— ಎದುರು ಸಿಕ್ಕಿದ ಯಾವುದನ್ನೂ ಉಳಿಸುವುದಿಲ್ಲ. ಈ ಸವಾಲು ನಾವು ಆತನಿಗೆ ಹಾಕಬಹುದು. ಯುವ ಕಾಂಗ್ರೆಸ್ಸ್‌ನ ಹೆಸರಿನಲ್ಲಿ ಬಂದೆರಗಿದ ಮಂದೆಗಳನ್ನು ದೆಹಲಿಯ ಜನ ಆಗಲೇ ನೋಡಿದ್ದಾರೆ.

ಆದರೆ ಕೈಯಲ್ಲಿ ಕೆಂಬಾವುಟ ಹಿಡಿದ ಹತ್ತು ಲಕ್ಷಕ್ಕೂ ಹೆಚ್ಚು ಸಂಖ್ಯೆಯ ಜನಗಳನ್ನು ದೆಹಲಿ ಜನ ನೋಡಿರಲಿಲ್ಲ. ಸಭೆಯ ನಂತರ ವಾಪಾಸಾಗುವಾಗಲೂ ಅವರು ಅತ್ಯಂತ ಶಿಸ್ತಿನಿಂದಲೇ ಹೊರಟರು. ಇದು ಅತ್ಯಂತ ಶಿಸ್ತಿನ ಸಭೆ ಎಂದು ಪೋಲೀಸರು ಒಪ್ಪಿಕೊಂಡಿದ್ದಾರೆ.

ರ್‍ಯಾಲಿ ಭಾರತ್ ಬಂದ್‌ನ ಕಾರ್ಯಕ್ರಮ ಅಂಗೀಕರಿಸಬೇಕು. ಅದನ್ನೀಗ ಕೈಗೆತ್ತಿಕೊಳ್ಳಬೇಕು, ಜ್ಯಾರಿಗೆ ತರಬೇಕು. ನಾವು ಆತ್ಮ ವಿಶ್ವಾಸದಿಂದ, ಜತೆಗೆ ಜಾಗರೂಕತೆಯಿಂದ ಮುಂದುವರಿಯೋಣ. ಯಾಕೆಂದರೆ ನಮಗೆ ಶಕ್ತಿಯಿದೆ, ಆದರೆ ಶತ್ರು ತುಂಬಾ ಚತುರ. ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯಾತೀತ ಶಕ್ತಿಗಳನ್ನು ನಮ್ಮ ಜೊತೆಗೆ ಕರೆದೊಯ್ಯಬೇಕಾಗಿದೆ. ●

ಕಾರ್ಮಿಕರ-ರೈತರ ಮಿತ್ರಕೂಟ ಶೀಘ್ರದಲ್ಲೇ ನಿಮ್ಮ ಸರಕಾರದ ಬುಡವನ್ನೇ ಅಲುಗಾಡಿಸಲಿವೆ. ನೀವು ಕಳೆದ ಎರಡು ವರ್ಷಗಳಲ್ಲಿ ದೇಶವನ್ನಾಳುವಲ್ಲಿ ವಿಫಲಗೊಂಡಿದ್ದೀರಿ ಎಂದು ನೆನಪಿಸಲು ನಾವಿಲ್ಲಿಗೆ ಬಂದಿದ್ದೇವೆ.

ದೇಶವನ್ನಾಳಿಸಲು ನಿಮಗೆ ಸಾಧ್ಯವಿಲ್ಲ. ರೋಗಗ್ರಸ್ತ ಕೈಗಾರಿಕೆಗಳ ಸಂಖ್ಯೆ ಏರುತ್ತಲೇ ಇದೆ. ಭ್ರಷ್ಟಾಚಾರ ಮತ್ತು ಕೋಮುವಾದ ಹೆಚ್ಚಿದೆ.

ನಮಗೆ ನಿಮ್ಮಲ್ಲಿ ಯಾವ ನಂಬಿಕೆಯೂ ಇಲ್ಲ, ಭರವಸೆಯೂ ಇಲ್ಲ. ನಾವು ನಿಮ್ಮನ್ನು ಅಧಿಕಾರದಿಂದ ಹೊರಗೆಸೆಯುತ್ತೇವೆ. ಇವತ್ತಿನ ರ್‍ಯಾಲಿ ಆ ದಿಕ್ಕಿನಲ್ಲಿ ಮೊದಲ ಹೆಜ್ಜೆ. ನಂತರ ಒಂದು ದಿನದ 'ಭಾರತ್ ಬಂದ್' ಕರೆ ನೀಡಲಾಗುತ್ತಿದೆ. ಆ ದಿನ ಸಮಸ್ತ ದೇಶವನ್ನು ಸ್ತಬ್ಧಗೊಳಿಸಲಾಗುವುದು ಎಲ್ಲಾ ಕಾರ್ಖಾನೆಗಳು, ದುಡಿಮೆಯ ಸ್ಥಳಗಳು ಮುಚ್ಚಲ್ಪಡುವವು. ರೈಲುಗಳು ನಿಲ್ಲುವವು. ಮೂರನೇ ಹೆಜ್ಜೆ ಕಾಂಗ್ರೆಸ್(ಐ)ಎಂ.ಪಿ.ಗಳರಾಜೀನಾಮೆ ಒತ್ತಾಯಿಸಿ ಘೇರಾವೋ.

—ಬಿ.ಟಿ.ರಣದಿವೆ.

(ಚಾರಿತ್ರಿಕ ರ್‍ಯಾಲಿಯನ್ನುದ್ದೇಶಿಸಿ ಮಾತನಾಡುತ್ತಾ)

ಇಂಥ ಬಲ ಪ್ರದರ್ಶನಗಳು ದೆಹಲಿಯಲ್ಲಿ ಹಿಂದೆಯೂ ನಡೆದಿವೆ. ಹಲವಾರು ಭ್ರಷ್ಟಚಾರದ ಹಗರಣಗಳು, ಮತ್ತು ಚುನಾವಣೆ ಸೋಲುಗಳು ತನ್ನ ವರ್ಚಸ್ಸನ್ನು ಕ್ಷೀಣಿಸುತ್ತಿವೆಯೆಂದು ಕಾಂಗ್ರೆ ಭಯ ಪಟ್ಟಾಗ ಕಾಂಗ್ರೆ ಪಕ್ಷವೇ ಅಂಥ ಒಂದು ಸಭೆಯನ್ನು ನಡೆಸಿತು. ಅದಕ್ಕೂ ಕೆಲವು ವರ್ಷಗಳ ಹಿಂದೆ ಆಗಿನ ಗೃಹ ಮಂತ್ರಿ ಚೌಧರಿ ಚರಣಸಿಂಹ ಅವರ ಹುಟ್ಟು ಹಬ್ಬದ ಸಂಬಂಧದಲ್ಲಿ "ಕಿಸಾನ್ ಮೇಳ" ಒಂದನ್ನು ನಡೆಸಲಾಯಿತು.

ಆದರೆ ಆ ಎರಡು ಸಂದರ್ಭಗಳಲ್ಲಿಯೂ ಆಡಳಿತ ಯಂತ್ರವನ್ನು ಧಾರಾಳವಾಗಿ ದುರುಪಯೋಗ ಪಡಿಸಿಕೊಳ್ಳಲಾಯಿತೆಂಬ ಆಪಾದನೆ ವ್ಯಾಪಕವಾಗಿ ಕೇಳಿಬಂತು. ಆಪಾದನೆಗಳು ನಿರಾಧಾರವೇನಾಗಿರಲಿಲ್ಲ.

ಸಿ.ವಿ.ರಾಜಗೋಪಾಲ (ಕನ್ನಡಪ್ರಭ ಲೇಖನದಲ್ಲಿ)

ಉಡುಪಿ

ನವಂಬರ್ 30ರಂದು ರೈತ ಕಾರ್ಮಿಕರು ಉಡುಪಿಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಸಂಜೆ 5.30ಕ್ಕೆ ರಥ ಬೀದಿಯಲ್ಲಿ ಬಹಿರಂಗ ಸಭೆ ಏರ್ಪಡಿಸಲಾಗಿತ್ತು. ಸಭೆಯನ್ನುದ್ದೇಶಿಸಿ ಕಾ. ಡೇವಿಡ್ ಎ. ಕರ್ಕಡ, ಪಕ್ಷದ ಜಿಲ್ಲಾ ಕಾರ್ಯದರ್ಶಿಕಾ.ಕೆ.ಆರ್.ಶ್ರೀಯಾನ್ ರವರಗಳು ಮಾತನಾಡಿ ರಾಜೀವ್ ಗಾಂಧಿ ಆಡಳಿತದಲ್ಲಿ ದೇಶದ ರೈತ ಕಾರ್ಮಿಕರ ಹಾಗೂ ನಿರುದ್ಯೋಗಿ ಯುವ ಜನತೆಯ ಸಮಸ್ಯೆಗಳು ಉಲ್ಬಣಗೊಳ್ಳುವಂತಾಗಿದೆ. ಮಹಿಳೆಯರ ಹಕ್ಕುಗಳನ್ನು ಸಂರಕ್ಷಿಸುವಲ್ಲಿ ಪ್ರತ್ಯೇಕತಾವಾದಿ,ಕೋಮುವಾದಿ, ಶಕ್ತಿಗಳನ್ನು ದಮನ ಮಾಡುವಲ್ಲಿ ವಿಫಲಗೊಂಡಿರುವ ರಾಜೀವ್‌ಗಾಂಧಿ ರಾಜೀನಾಮೆ ನೀಡಿ ಮಧ್ಯಂತರ ಚುನಾವಣೆ ನಡೆಸಬೇಕೆಂದು ಒತ್ತಾಯಸಲಾಯಿತು. ಸಭೆಗೆ ಪ್ರಾರಂಭದಲ್ಲಿ ಕಾ.ಎನ್. ಸಾಧುಅಮೀನ್ ಸ್ವಾಗತಿಸಿದರು.

ಬೃಹತ್ ಎಡಪಂಥೀಯ ರ್‍ಯಾಲಿ

★ ಸುಮಾರು ಒಂದು ಮಿಲಿಯ ಜನ ನವದೆಹಲಿಯ ಬೋಟ್ ಕ್ಲಬ್‌ನಲ್ಲಿ ಕೆಂಪು ಕೋಟೆಯ ಮೇಲೆ ಕೆಂಬಾವುಟ ಹಾರಾಡಬೇಕೆಂದು ತಮ್ಮ ಬಯಕೆಯನ್ನು ಘೋಷಿಸಿದರು.

ಎತ್ತರೆತ್ತರದ ಕಟ್ಟಡಗಳಿಂದ ಇಣಕಿಣಕಿ ನೋಡುತ್ತಿದ್ದ ದಿಲ್ಲಿವಾಲಾಗಳು ಹತ್ತಾರು ಭಾಷೆಗಳಲ್ಲಿ ಒಂದೇಕೇಂದ್ರ ಸಂದೇಶಗಳನ್ನು ಕೇಳಿದರು. "ರಾಜೀವ ಗಾಂಧಿ ನಿಷ್ಪ್ರಯೋಜಕ, ಆತನ ಮಂತ್ರಿಗಳು ಹೇಡಿಗಳು-ದೇಶ ಮತ್ತು ಜನತೆ ಮಂಡಿಯೂರುವಂತೆ ಮಾಡಿದ್ದಾರೆ. ಆದ್ದರಿಂದ ರಾಜೀವ ಸರ್ಕಾರ ಕೆಳಗಿಳಿಯಬೇಕು"

ಗ್ರಾಮೀಣ ಭಾರತ ದೆಹಲಿಗೆ ಸಾಗಿ ಬಂದಿತು.

ಸ್ಟೇಟ್ಸ್ ಮನ್

★ ಸಾವಿರ-ಸಾವಿರ ಸಂಖ್ಯೆಯಲ್ಲಿ ವಿವಿಧ ರಾಜ್ಯಗಳಿಂದ ಕೆಂಬಾವುಟಗಳನ್ನು ಹಿಡಿದು ಬಂದ ಜನ ಕೆಂಪು ಕೋಟೆಯಿಂದ ಮೆರವಣಿಗೆಯಲ್ಲಿ ಹೊರಟರು. ಬೋಟ್ ಕ್ಲಬ್ ಕೆಂಪಾಗಿ ಪರಿವರ್ತನೆಗೊಂಡಿತು.

—ಹಿಂದೂಸ್ತಾನ್ ಟೈಮ್ಸ್

ರಾಜೀವ್ ಗಾಂಧಿ ಅಧಿಕಾರದಿಂದಿಳಿಯಬೇಕೆಂದು ಎಡ ರ್‍ಯಾಲಿ

★ ಕೇಂದ್ರದ ಸರ್ಕಾರಕ್ಕೆ ಪ್ರಯಾರ್ಯವನ್ನು ರೂಪಿಸಲು ವಿವಿಧ ಪಕ್ಷಗಳು ಪ್ರಯತ್ನಿಸುತ್ತಿರುವ ಸಮಯದಲ್ಲಿ ಸಂಘಟಿಸಲ್ಪಟ್ಟ, ಬೋಟ್ ಕ್ಲಬ್‌ನಿಂದ ಇಂಡಿಯನ್ ಗೇಟ್‌ವರೆಗೆ ಹರಡಿದ್ದ ಬೃಹತ್ ಕೆಂಪು ಸಾಗರ ಕೇಂದ್ರ ಸರ್ಕಾರ ಕೆಳಗಿಳಿಯಬೇಕೆಂದು ಒತ್ತಾಯಿಸಲು ಒಂದು ದಿನದ ಭಾರತ್ ಬಂದ್‌ಗೆ ಕರೆ ನೀಡಿತು

ಬಹಳ ಮಂದಿ ಬರಿಗಾಲಲ್ಲೇ ಬಂದಿದ್ದರು. ಸುಮಾರಾಗಿ ಎಲ್ಲರೂ ಸಂಘಟಕರು ಹೇಳಿರುವಂತೆ "ಬೆವರು ಸುರಿಸುವ ಶ್ರಮಜೀವಿಗಳೇ"

-ಟೈಂಸ್ ಆಫ್ ಇಂಡಿಯಾ

★ ಎಡಪಕ್ಷಗಳು ಏರ್ಪಡಿಸಿದ್ದ ಬೃಹತ್ ಪ್ರಮಾಣದ ರ್‍ಯಾಲಿಯಲ್ಲಿ ಸುಮಾರು ಒಂದು ಮಿಲಿಯ ಜನ ಭಾಗವಹಿಸಿದ್ದರು.-ಆ ಪಕ್ಷಗಳು ಸುಮಾರು ಒಂದು ತಿಂಗಳ ದೇಶವ್ಯಾಪ್ತಿ ಪ್ರಚಾರ-ಪ್ರಕ್ಷೋಭೆ ಜನಗಳಿಂದ ಒಳ್ಳೆಯ ಪ್ರತಿಕ್ರಿಯೆ ಗಳಿಸುವಲ್ಲಿ ಯಶಸ್ವಿಯಾಗಿದೆಯೆಂಬುದನ್ನು ಚೆನ್ನಾಗಿ ತೋರಿಸಿಕೊಟ್ಟಿತು. ಅತ್ಯಂತ ಮಹತ್ವದ ಸಂಗತಿಯೆಂದರೆ, ಹೆಚ್ಚಿನ ಮೆರವಣಿಗೆಕಾರರು ಎಲ್ಲಿ ಎಡ ಪಂಥೀಯರಿಗೆ ಏನು ಬಲವೇ ಇಲ್ಲ ಎಂದು ಹೇಳಲಾಗುತ್ತಿದೆಯೋ ಅಂತಹ ಹಿಂದೀ ಮಾತನಾಡುವ ಪ್ರದೇಶಗಳಿಂದಲೇ ಬಂದಿದ್ದರು.

—ಹಿಂದೂ

★ ಕೆಂಬಾವುಟಗಳನ್ನು ಬೀಸುತ್ತಾ, ಕೆಂಪು ಬ್ಯಾನರ್‌ಗಳನ್ನು ಎತ್ತಿ ಹಿಡಿದ ಮಾನವ ಸಾಗರವೊಂದು ರಾಜೀವ್ ಗಾಂಧಿ ಸರ್ಕಾರ ಎಲ್ಲಾ ರಂಗಗಳಲ್ಲಿ ಸೋಳಿದೆಯಾದ್ದರಿಂದ ರಾಜೀನಾಮೆ ಕೊಡಬೇಕೆಂದು ಒತ್ತಾಯಿಸಿತು.

ಡಿಸೆಂಬರ್ 9 ನವೀಕರಣ ಹಾಗೂ ಆಶಾಕಿರಣ ತೋರಿದ ದಿನವೆಂದು ಸ್ಮರಿಸಲ್ಪಡುವುದು.

—ಪೆಟ್ರಿಯಟ್

"ಎಡಪಂಥೀಯರ ಚಾರಿತ್ರಿಕ ರ್‍ಯಾಲಿ"

★ ಮೆರವಣಿಗೆಕಾರರು ಅಲೆಅಲೆಯಾಗಿ ಬೋಟ್ ಕ್ಲಬ್‌ಗೆ ಬಂದರು. ರಾಜಧಾನಿಗೆ ಬರುವ ಮಾರ್ಗದಲ್ಲಿನ ತೊಂದರೆಗಳು ಮತ್ತು ಕೊರೆಯುವ ಚಳಿಯನ್ನು ಲೆಕ್ಕಿಸದೆ ಯುವಕರು, ಮುದುಕರು, ರೈತರು, ಕಾರ್ಮಿಕರು, ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಭಾಗವಹಿಸಿದರು. ಕೆಲವು ಗಂಟೆಗಳ ಕಾಲ ಬೋಟ್ ಕ್ಲಬ್ ಪುಟ್ಟ ಭಾರತವಾಗಿ ಮಾರ್ಪಟ್ಟಿತು. ಇದು ಎಡ ಪಂಥೀಯರು ಸಂಘಟಿಸಿದ ಅತೀ ದೊಡ್ಡ ಸಭೆ. ಬಹಳ ಮಂದಿಗೆ ಚಳಿಯಿಂದ ರಕ್ಷಿಸಿಕೊಳ್ಳಲು ಒಂದು ಸ್ವೆಟರ್ ಅಥವಾ ಶಾಲು ಕೂಡಾ ಇರಲಿಲ್ಲ. ಅವರಿಗೆ ಯಾರೂ ಹಣವನ್ನು ಕೊಟ್ಟಿರಲಿಲ್ಲ, ಆಹಾರ ಕೂಡಾ ಪುಕ್ಕಟೆ ಕೊಟ್ಟಿರಲಿಲ್ಲವಾದರೂ ಅವರು ಬಂದಿದ್ದರು.

-ಇಂಡಿಯನ್ ಎಕ್ಸ್‌ಪ್ರೆಸ್, ದೆಹಲಿ ಆವೃತ್ತಿ

'ಬೋಟ್‌ಕ್ಲಬ್‌ನಲ್ಲಿ ಕೆಂಬಾವುಟಗಳ ಮಹಾಪೂರ'

★ ಎಡ ಪಕ್ಷಗಳ ಇಂದಿನ ಇತಿಹಾಸ ರ್‍ಯಾಲಿ ಇಡೀ ದೆಹಲಿಯನ್ನೇ ಕೆಂಪಾಗಿಸಿತು. ಬಹಳ ವರ್ಷಗಳಿಂದ ಇಷ್ಟು ದೊಡ್ಡ ರ್‍ಯಾಲಿ ನಡೆದಿರಲಿಲ್ಲವೆಂದು ಪ್ರತಿಯೊಬ್ಬರೂ ಒಪ್ಪುತ್ತಾರೆ.

ದೆಹಲಿಯ ಇತಿಹಾಸದಲ್ಲಿ ಮೊದಲ ಬಾರಿಗೆ ಐದು ಲಕ್ಷ ಜನರ ರ್‍ಯಾಲಿ ಯಾವುದೇ ಅಹಿತಕರ ಘಟನೆ ಅಥವಾ ಸಮಸ್ಯೆಯಿಲ್ಲದೆ ಜರುಗಿತು. ರಾಜೀನಾಮೆ ಕೇಳಲು ಬಂದವರ ಬಗ್ಗೆ ಸಂಶಯ ಗ್ರಸ್ತರಾಗಿದ್ದ, ಅವರ ಶಿಸ್ತಿನ ಬಗ್ಗೆ

6 ನೇ ಪುಟ ನೋಡಿ

ಅಣ್ವಸ್ತ್ರ ಒಪ್ಪಂದ ಸ್ವಾಗತಿಸಿದ ನಿರ್ಣಯ

ಎಡ ಪಕ್ಷಗಳ ನೇತೃತ್ವದ ಸಾಮೂಹಿಕ ಸಂಘಟನೆಗಳ ಡಿಸೆಂಬರ್ 9ರ ಈ ಚಾರಿತ್ರಿಕ ಸಭೆ ಸಮೀಪಗಾಮಿ ಹಾಗೂ ಮಧ್ಯಮ ದೂರದ ಕ್ಷಿಪಣಿಗಳನ್ನು ತೊಲಗಿಸುವ ಒಪ್ಪಂದಕ್ಕೆ ಪ್ರಧಾನ ಕಾರ್ಯದರ್ಶಿ ಗೋರ್ಬಚೆವ್ ಹಾಗೂ ಅಧ್ಯಕ್ಷ ರೇಗನ್ ಸಹಿ ಹಾಕಿರುವುದನ್ನು ಹಾರ್ದಿಕವಾಗಿ ಸ್ವಾಗತಿಸುತ್ತದೆ.

ಕೋಟಿಗಟ್ಟಲೆ ಭಾರತೀಯರ ಭಾವನೆಗಳನ್ನು ಪ್ರತಿಧ್ವನಿಸುವ ಇಲ್ಲಿ ನೆರೆದಿರುವ ಲಕ್ಷಗಟ್ಟಲೆ ಜನ ವಿಶ್ವಾದ್ಯಂತ ಕೋಟಿಗಟ್ಟಲೆ ದನಿಗಳೊಂದಿಗೆ ತಮ್ಮ ದನಿಗೂಡಿಸಿ ಸಾಮರಿಕ ಕ್ಷಿಪಣಿಗಳನ್ನು 50ಶೇಕಡಾ ಕಡಿತಗೊಳಿಸಬೇಕೆಂಬ ಸೋವಿಯೆತ್ ಒಕ್ಕೂಟದ ಸೂಚನೆಯನ್ನು ತಕ್ಷಣ ಸ್ವೀಕರಿಸಬೇಕೆಂದು ಮತ್ತು ವಿಶ್ವವನ್ನೊಂದು ಅಣು ಪ್ರಳಯದತ್ತ ನೂಕುವ ಸಾಮ್ರಾಜ್ಯಶಾಹೀ ತಂತ್ರಗಳನ್ನು ತ್ಯಜಿಸಬೇಕೆಂದು ಅಮೇರಿಕನ್ ಆಡಳಿತವನ್ನು ಒತ್ತಾಯಿಸುತ್ತೇವೆ. ಇದು ಎಲ್ಲಾಅಣ್ವಸ್ತ್ರಗಳ ನಿರ್ನಾಮದತ್ತ ಇನ್ನೊಂದು ಹೆಜ್ಜೆಯಾಗುತ್ತದೆ.

(5 ನೇ ಪುಟದಿಂದ)

ಗೊತ್ತಿರದಿದ್ದ ಪೋಲೀಸರು ಇಪ್ಪತ್ತು ತುಕಡಿಗಳನ್ನು ಕೆಲಸಕ್ಕೆ ಹಚ್ಚಿದ್ದರು.

ರ್‍ಯಾಲಿಗೆ ಬಂದವರಲ್ಲಿ 10 ಶೇಕಡಾ ತಂತಮ್ಮ ಸೀಮೆಯ ವೇಷ ಭೂಷಣಗಳಲ್ಲಿ ಬಂದ ಮಹಿಳೆಯರು.

ವಿಶೇಷ ರೈಲಿನ ವ್ಯವಸ್ಥೆಯಿಲ್ಲದೇನೇ ಜನ ಸತತವಾಗಿ ದಿಲ್ಲಿಗೆ ಬರುತ್ತಿದ್ದರು.

'ಜನ ಸತ್ತಾ'-ಇಂಡಿಯನ್ ಎಕ್ಸ್‌ಪ್ರೆಸ್ ಗುಂಪಿನ ಹಿಂದೀ ಪತ್ರಿಕೆ

★ ಇದೇ ಪತ್ರಿಕಾ ಗುಂಪಿನ ಬೆಂಗಳೂರು ಆವೃತ್ತಿಗಾಗಲೀ, 'ಕನ್ನಡ ಪ್ರಭ' ಕ್ಕಾಗಲೀ ಇದು ದೊಡ್ಡ ಸುದ್ದಿಯಾಗಿ ಕಾಣಲಿಲ್ಲ. ಆದರೆ ಮೂರು ದಿನಗಳ ನಂತರ ಪ್ರಕಟವಾಗಿರುವ ಶ್ರೀ ಸಿ.ವಿ.ರಾಜಗೋಪಾಲ್‌ರ ಲೇಖನ ಹೀಗೆ ಗಮನಿಸಿದೆ.

"ಒಂದು ವರದಿಯಂತೆ ಸ್ವಾತಂತ್ರ್ಯ ಬಂದ ಈ ನಲ್ವತ್ತು ವರ್ಷಗಳಲ್ಲಿ ವಾಮ ಪಕ್ಷಗಳಿಂದ ರಾಷ್ಟ್ರದ ರಾಜಧಾನಿಯಲ್ಲಿ ಅಂತಹ ಬೃಹತ್ ಪ್ರದರ್ಶನ ನಡೆದಿರಲಿಲ್ಲ. ಸಂಖ್ಯೆಯ ದೃಷ್ಟಿಯಿಂದ ಅದೊಂದು ಮಹಾ ಯಶಸ್ಸು ಅನ್ನುವುದಂತೂ ಯಾರೂ ನಿರಾಕರಿಸುವಂತಿಲ್ಲ.

ಬುಧವಾರದ ರ್‍ಯಾಲಿಯ ವೈಶಿಷ್ಟ್ಯವೆಂದರೆ "ಸರಕಾರೀ" ಮೇಳ ಆಗಲಿಲ್ಲ ಎನ್ನುವುದು.

ನಿಷ್ಪಕ್ಷಪಾತವಾದ ಒಂದು ಪತ್ರಿಕೆಯ ವರದಿಯಂತೆ ರ್‍ಯಾಲಿಯಲ್ಲಿ ಭಾಗವಹಿಸಿದ ಬಹುಮಂದಿ "ಹಿಂದೀ" ರಾಜ್ಯಗಳಿಂದ ಬಂದಿದ್ದರು. ಆ ರಾಜ್ಯಗಳ ಪೈಕಿ ಹರಿಯಾಣಾ ಬಿಟ್ಟರೆ ಉಳಿದವು ಕಾಂಗ್ರೆ ಆಡಳಿತದಲ್ಲಿದೆ. ವಾಸ್ತವವಾಗಿ ಹಲವು ರಾಜ್ಯಗಳಲ್ಲಿ ರ್‍ಯಾಲಿಗೆ ಹೋಗುತ್ತಿದ್ದವರಿಗೆ ಅಡ್ಡಿ ಆತಂಕವೊಡ್ಡಲಾಯಿತು."

ಉಳ್ಳಾಲ್ತರು

ಡಿ.ವೈ.ಎಫ್.ಐ. ಕಾರ್ಯಕರ್ತರು ದೇಶದ ಐಕ್ಯತೆ,ಸಮಗ್ರತೆ, ರಕ್ಷಣೆಗಾಗಿ ಜಾತೀಯವಾದಿ, ಕೋಮುವಾದಿ,ಶಕ್ತಿಗಳ ವಿರುದ್ಧ ಉದ್ಯೋಗದ ಹಕ್ಕು ಮೂಲಭೂತ ಹಕ್ಕಾಗಲು ಸಂಘಟನೆಯನ್ನು ಬಲಿಷ್ಠಗೊಳಿಸಿ ಹೋರಾಟ ನಡೆಸಬೇಕೆಂದುರಾಜ್ಯ ಡಿ.ವೈ.ಎಫ್.ಐ ಮಾಜಿ ಅಧ್ಯಕ್ಷರಾದ ಕಾ.ಮಹಾಬಲ ವಡೇರಹೋಬ್ಳಿಯವರು ನವಂಬರ್ 8 ರಂದು ಉಳ್ಳಾಲ್ತರಿನ ಘಟಕ ಉದ್ಘಾಟಿಸುತ್ತಾ ಕರ ನೀಡಿದರು.

ಮಂಡಲ ಪಂಚಾಯ್ತಿ ಸದಸ್ಯರಾದ ಕಾ.ಶಿವರಾಂಶೆಟ್ಟಿ ಮತ್ತು ಕಾ.ಸುಧಾಕರ ಅವರು ಉಪಸ್ಥಿತರಿದ್ದರು.

ಕಾ.ರಮಾನಾಥಭಂಡಾರಿ ಅಧ್ಯಕ್ಷತೆ ವಹಿಸಿದ್ದರು. ಉಳ್ಳಾಲ್ತರು ಘಟಕಕ್ಕೆ ಕಾ ರವಿರಾಜಶೆಟ್ಟಿ (ಅಧ್ಯಕ್ಷ)ನಾರಾಯಣಶೆಟ್ಟಿ (ಉಪಾಧ್ಯಕ್ಷರು) ಕರುಣಾಕರ ಶೆಟ್ಟಿ(ಕಾರ್ಯದರ್ಶಿ) ರಮಾನಾಥ ಭಂಡಾರಿ(ಜೊತೆ ಕಾರ್ಯದರ್ಶಿ) ಬಾಲಕೃಷ್ಣ ಹೆಬ್ಬಾರ್ ಖಜಾಂಚಿ ಜೊತೆಗೆ 21 ಮಂದಿಯ ಸಮಿತಿ ರಚಿಸಲಾಯಿತು.

ರಾಣೆಬೆನ್ನೂರು

ದೇಶದ ಯುವಜನತೆ ಎದುರಿಸುತ್ತಿರುವ ನಿರುದ್ಯೋಗ ಸಮಸ್ಯೆಯಿಂದಾಗಿ ಹಲವಾರು ದುಷ್ಚಟಗಳಿಗೆ ಬಲಿಯಾಗುತ್ತಿದ್ದಾರೆ; ದುಷ್ಟ ಶಕ್ತಿಗಳ ಆಮಿಷಗಳಿಗೆ ಬಲಿಯಾಗಿ ಸಮಾಜ ಘಾತುಕ ಕೃತ್ಯಗಳಲ್ಲಿ ತೊಡಗುತ್ತಿದ್ದಾರೆ ಎಂದು ವಿದ್ಯಾರ್ಥಿಮುಖಂಡ ಕಾ.ಎಸ್.ಆರ್. ಆರಾಧ್ಯರಾಣೆಬೆನ್ನೂರಿನಘಟಕಉದ್ಘಾಟಿಸುತ್ತಾ ಅವರು ಮಾತನಾಡುತ್ತಿದ್ದರು. ವಿಶ್ವಶಾಂತಿ, ದೇಶದ ಸಮಗ್ರತೆ ಕಾಪಾಡಲು, ನಿರುದ್ಯೋಗ, ಅನಕ್ಷರತೆ ಮೂಡನಂಬಿಕೆಗಳ ವಿರುದ್ಧ ಹೋರಾಟ ನಡೆಸಲು ಅವರು ಕರೆ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಕಾ.ನಿತ್ಯಾನಂದಸ್ವಾಮಿಯವರು ವಹಿಸಿದ್ದರು. ವಿವಿಧ ಸಂಘಟನೆ ನಾಯಕರು ಶುಭಕೋರಿ ಮಾತನಾಡಿದರು. ಘಟಕಕ್ಕೆ ಕಾ.ಫಕೀರಪ್ಪ ಆರ್.ವಿಭೂತಿ (ಅಧ್ಯಕ್ಷ) ಆರ್.ಎಚ್. ಅಗಸನಹಳ್ಳಿ (ಉಪಾಧ್ಯಕ್ಷ) ಪರಶುರಾಮಬಗಾದಿ (ಕಾರ್ಯದರ್ಶಿ) ಕೃಷ್ಣಪ್ಪಕಾರಂತ (ಸಹಕಾರ್ಯದರ್ಶಿ) ಸೋಮಶೇಖರ ವಿಭೂತಿ ಖಜಾಂಚಿಯಾಗಿರುವ ಸಮಿತಿ ರಚಿಸಲಾಯಿತು.

ದೆಹಲಿ ಚಲೋ ಪ್ರಚಾರ ಸಭೆಗಳು

ಬೆಂಗಳೂರು

ಹೊಸ ಆರ್ಥಿಕ ನೀತಿ, ನೂತನ ಶಿಕ್ಷಣ ನೀತಿ, ಕೈಗಾರಿಕಾ ನೀತಿಗಳನ್ನು ದೇಶದಲ್ಲಿ ಜಾರಿಗೆ ತಂದು ತನ್ಮೂಲಕ ಸ್ವಚ್ಛ ಸರ್ಕಾರ ನೀಡುವ ಭರವಸೆಯೊಂದಿಗೆ ಅಧಿಕಾರಕ್ಕೆ ಬಂದ ರಾಜೀವ ಗಾಂಧಿ ಜನತೆಯ ಯಾವೊಂದು ವಿಭಾಗದ ಸಮಸ್ಯೆಗಳನ್ನು ಬಗೆ ಹರಿಸುವಲ್ಲಿ ವಿಫಲ ಗೊಂಡಿದ್ದಾರೆ. ತಾನು ಹೇಳಿದ್ದು ಏನೊಂದು ನಡೆಯದಿರುವುದರಿಂದ ಅಧಿಕಾರದಲ್ಲಿ ಮುಂದುವರೆಯುವ ಎಲ್ಲಾನೈತಿಕ ಹಕ್ಕುಗಳನ್ನು ಕಳೆದುಕೊಂಡಿದ್ದು ಕೂಡಲೇರಾಜೀನಾಮೆ ನೀಡಿ ಮಧ್ಯಂತರ ಚುನಾವಣೆ ನಡೆಸಬೇಕೆಂದು ಬೆಂಗಳೂರು ನಗರದ ಶ್ರೀರಾಮಪುರದಲ್ಲಿ ಪಕ್ಷದ ಸ್ಥಳೀಯ ಶಾಖೆಗಳು ಜಂಟಿಯಾಗಿ ಡಿಸೆಂಬರ್ 9ರಂದು ಏರ್ಪಡಿಸಿದ್ದ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ್ದ ಪಕ್ಷದ ಹಿರಿಯ ಮುಖಂಡರುಗಳಾದ ಕಾ.ಎಸ್. ಸೂರ್ಯನಾರಾಯಣರಾವ್, ಪಿ.ಕೆ. ಸುಬ್ರಮಣಿ, ನಾಗಮೋಹನ್‌ದಾಸ್ ರವರುಗಳು ಒತ್ತಾಯಿಸಿದರು. ಮಧ್ಯಾಹ್ನ 3 ಗಂಟೆಗೆ ಶ್ರೀರಾಮಪುರದ ಪಕ್ಷದ ಕಛೇರಿಯಿಂದ ಹೊರಟ ಮೆರವಣಿಗೆ ಘೋಷಣೆಗಳನ್ನು ಕೂಗುತ್ತಾ ಜನತೆಯ ಗಮನ ಸೆಳೆದರು. ಡಿಸಂಬರ್9ರಂದು ನವದೆಹಲಿಯಕೆಂಪುಕೋಟೆಯಿಂದ ಹೊರಟ ದೇಶದ ಮೂಲೆ ಮೂಲೆಗಳಿಂದ ಹರಿದುಬಂದ ಲಕ್ಷಾಂತರ ಜನತೆ ಕಿವುಡಾದ ರಾಜೀವ್ ಸರ್ಕಾರವನ್ನು ಎಚ್ಚರಿಸುವ ಸಮಯದಲ್ಲೇ ಶ್ರೀರಾಮಪುರದ ಪಕ್ಷದ ಸಂಗಾತಿಗಳು ದೆಹಲಿಯ ಕಂಠಕ್ಕೆ ತಮ್ಮ ಧ್ವನಿಯನ್ನು ಸೇರಿಸಿದರು. ಈ ಸಭೆಯ ಅಧ್ಯಕ್ಷತೆಯನ್ನು ಕಾ. ಸುಬ್ಬರಾವ್ ರವರು ವಹಿಸಿದ್ದರು.

ಕುಂದಾಪುರ

ಡಿಸೆಂಬರ್ 9ರ ದೆಹಲಿ ರ್‍ಯಾಲಿಯ ಯಶಸ್ವಿಗೊಳಿಸಲು ಕುಂದಾಪುರ ತಾಲ್ಲೂಕಿನಲ್ಲಿ ನವಂಬರ್ 25 ರಿಂದ 29ರ ವರೆಗೆ ಸಿದ್ದಾಪುರ, ಬಸ್ರೂರು, ಕೋಟೇಶ್ವರ, ಸಾಲಿಗ್ರಾಮ ಮತ್ತು ತಲ್ಲೂರು ಮುಂತಾದ ಪ್ರಮುಖ ಪ್ರದೇಶಗಳಲ್ಲಿ ಸಿ.ಪಿ.ಐ.(ಎಂ) ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಆಶ್ರಯದಲ್ಲಿ ಸಾರ್ವಜನಿಕ ಪ್ರಚಾರ ಸಭೆಗಳನ್ನು ನಡೆಸಲಾಯಿತು.

ಈ ಪ್ರಚಾರ ಸಭೆಗಳಲ್ಲಿ ಕಾ॥ಯು. ದಾಸಭಂಡಾರಿ,ಸಿ.ನಾರಾಯಣ,ಕಾ.ಕೆ. ಶಂಕರ್ ಮತ್ತುಕಾಂ.ಅಬ್ರಹಾಂಕರ್ಕಡರವರುಗಳು ಸಭೆಯನ್ನುದ್ದೇಶಿಸಿ ಮಾತನಾಡಿದರು ನಾಲ್ಕು ಎಡ ಪಕ್ಷಗಳು ದೇಶದ ಮುಂದಿಟ್ಟಿರುವ ಪರ್ಯಾಯ ಕಾರ್ಯಕ್ರಮದ ಮಹತ್ವವನ್ನು ವಿವರಿಸಿದರು.

ಸಣ್ಣ ಕಾಫಿ ಬೆಳೆಗಾರರ ಯಶಸ್ವಿ ಹೋರಾಟ

ಕಳೆದ ನವಂಬರ್ 20 ರಂದು ಬೆಂಗಳೂರಿನ ಕಾಫಿ ಬೋರ್ಡ್‌ನ ಎದುರು ಭಾರತದ ಕಾಫಿ ಬೆಳಗಾರರನ್ನು ಪ್ರತಿನಿಧಿಕರಿಸಿ ಸಾವಿರಾರು "ಸಣ್ಣ ಕಾಫಿ ತೋಟ" ಮಾಲೀಕರು ಕೈಗೊಂಡ ಹೋರಾಟ ಭಾರತದ ಕಾಫಿ ಬೆಳಗಾರರ ಹೋರಾಟದಲ್ಲಿ ಒಂದು ಮೈಲುಗಲ್ಲಾಗಿತ್ತು. ಕೇರಳ, ಕರ್ನಾಟಕ, ತಮಿಳುನಾಡುಗಳ ರೈತರು ತಮ್ಮ ಬೇಡಿಕೆಗಳಿಗಾಗಿ ನಡೆಸಿದ ಹೋರಾಟವು ಕೆಲವೊಂದು ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದರೊಂದಿಗೆ ತಮ್ಮನ್ನು ಬಿಗಿದು ಉಸಿರುಗಟ್ಟಿಸುತ್ತಿರುವ ಸಮಸ್ಯೆಗಳತ್ತ ಸರಕಾರದ, ಬೋರ್ಡ್‌ನ ಗಮನ ಸೆಳೆಯುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ.

ಒಂದೆಡೆ ಬೋರ್ಡ್ ಮತ್ತು ಸರಕಾರ ಇನ್ನೊಂದೆಡೆ ಪ್ರಕೃತಿ ಇವುಗಳ ಮಧ್ಯೆ ಸಿಲುಕಿ ನರಳುತ್ತಿರುವ ರೈತರು (ಸಣ್ಣ ಬೆಳಗಾರರು) ಕಳೆದ ಆಗಸ್ಟ್ 23 ರಂದು ಕೇರಳದ ಕಲ್ಪಟ್ಟಾದಲ್ಲಿ ಕರ್ನಾಟಕ ರಾಜ್ಯ ಸಿ. ಪಿ. ಐ. (ಎಂ) ನ ಕಾರ್ಯದರ್ಶಿ ಕಾಂ॥ ಪಿ. ರಾಮಚಂದ್ರರಾವ್‌ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ತಮ್ಮನ್ನು ಕಾಡುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ ಪರಿಹಾರಕ್ಕಾಗಿ ಒತ್ತಾಯಿಸಲು ಈ ಹೋರಾಟವನ್ನು ಕೈಗೊಂಡಿದ್ದರು. ಈ ಹೋರಾಟ ಸಮಿತಿಯ ಸಂಚಾಲಕರಾಗಿದ್ದ ಕಾಂ॥ ಪಿ. ರಾಮಚಂದ್ರರಾವ್‌ರವರ ನೇತೃತ್ವದಲ್ಲಿ ಬೋರ್ಡ್ ಪ್ರತಿನಿಧಿಗಳೊಂದಿಗೆ ಚರ್ಚಿಸಿದ ನಿಯೋಗವು ತಮ್ಮ ಸಮಸ್ಯೆಗಳ ಬೇಡಿಕೆಗಳ ಮನವಿಯೊಂದನ್ನ ರ್ಪಿಸಿತು.

ಒಂದುಕೆ.ಜಿ.ಕಾಫಿಗೆ 25 ರೂ ಬೆಲೆ ಸಿಗಬೇಕು. ಸೀಮೆಗೊಬ್ಬರದವತಿಯಲ್ಲಿ 5./·ಸಹಾಯಧನಸಿಗಬೇಕು. 1980 ರಿಂದೀಚೆಗಿನ ಕಾಫಿಯ ಪೂರ್ಣ ಬೆಲೆಯನ್ನು ಕೊಡಬೇಕು. ಬರಗಾಲಕ್ಕೆ ತುತ್ತಾದ ಪ್ರದೇಶಗಳ ರೈತರಿಗೆ ತುರ್ತು ಸಹಾಯ ಧನವಾಗಿ 2300 ರೂ. ನೀಡಬೇಕು. ಕಾಫಿಯ ಮೇಲಿರುವ ರಫ್ತು ಸುಂಕ,ಖರೀದಿ ಸುಂಕ,ಎಂಬುವುಗಳನ್ನು ರದ್ದುಗೊಳಿಸಬೇಕು, 1000 ರೂ.ಗಳಿಗಿಂತಲೂ ಹೆಚ್ಚಿನ ಬೆಲೆಗೆ ಹಾಕಬೇಕು. ಕಾಫಿಯ ಬೆಲೆ ಪಾವತಿಸುವಾಗ ಈಗಿರುವ 5.8 ಕಂತುಗಳ ವ್ಯವಸ್ಥೆಯನ್ನು ಬದಲಾಯಿಸಿ "3" ಕಂತುಗಳಿಗೆ ವಿಸಾರದಂತೆ, ಒಂದು ವರ್ಷದೊಳಗೆ ಪೂರ್ಣ ಬೆಲೆ ಪಾವತಿಸಬೇಕು. ಕಾಫಿ ಬೋರ್ಡ್‌ನ್ನು ರೈತರ (ಬೆಳೆಗಾರರ) ಪ್ರಾತಿನಿಧ್ಯವನ್ನು ಹೆಚ್ಚಿಸಿ, ಪ್ರಜಾತಾಂತ್ರಿಕ ರೀತಿಯಲ್ಲಿ ಪುನಃ ಸಂಘಟಿಸಬೇಕು. ವ್ಯಾಪಕವಾಗಿ ಹರಡಿರುವ "ಬೋರಲು" ರೋಗವನ್ನು ತಡೆಯುವ ಕ್ರಿಯೆಯನ್ನು ಕಾಫಿ ಬೋರ್ಡ್ ವಹಿಸಿಕೊಳ್ಳಬೇಕು. ರಾಷ್ಟ್ರೀಕೃತ ಬ್ಯಾಂಕುಗಳು ಕಾಫಿ ಬೆಳೆಗಾರರಿಂದ ಸಾಲದ ಮೇಲೆ ಪಡೆಯುತ್ತಿರುವ ಶೇ. 17.5 ಬಡ್ಡಿಯನ್ನು 12.5 ವಾಗಿ ಕಡಿತಗೊಳಿಸಬೇಕು. "ರೈತ ರಕ್ಷಣಾ ನಿಯಮವನ್ನು ಜಾರಿಗೊಳಿಸಬೇಕು" ಮೊದಲಾದ 20 ಅಂಶಗಳನ್ನೊಳಗೊಂಡ ಮನವಿಯನ್ನು ಬೋರ್ಡ್ ಅಧಿಕಾರಿಗಳಿಗೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ದ್ವಿಪಕ್ಷೀಯ ಮಾತುಕತೆಯಲ್ಲಿ ರೈತರ ಕೆಲವು ಬೇಡಿಕೆಗಳನ್ನು ಈಡೇರಿಸಲು ಬೋರ್ಡ್ ಮುಂದೆ ಬಂದಿದೆ. ಇದು ಸ್ವಾಗತಾರ್ಹ. 1985-86 ರಲ್ಲಿ ಪೂಲ್ ಮಾಡಲಾದ ಕಾಫಿ ಅಂತಿಮ ಪಾವತಿಯಾಗಿ ಪಾಯಿಂಟಿಗೆ 0.25 ಪೈ ಗಳನ್ನೂ, 86 ರಲ್ಲಿ ಪೂಲ್ ಮಾಡಲಾದ "ರೊಬಸ್ಟಾ" ಕಾಫಿಗೆ 4./· ತಾತ್ಕಾಲಿಕ ಬೋನಸ್ಸನ್ನೂ, 86-87 ರಲ್ಲಿ ಮಾಡಲಾದ ಕಾಫಿಗೆ ಅನುಬಂಧವಾಗಿ ಪಾಯಿಂಟಿಗೆ 0.25 ಪೈ ಗಳನ್ನೂ ಕೊಡುವಂತೆ ಒಪ್ಪಿಕೊಂಡಿತು. ಈ ಹಣವನ್ನು ಡಿಸೆಂಬರ್ ಮೊದಲ ವಾರದಲ್ಲೇ ಕೊಡುವಂತೆಯೂ ಒಪ್ಪಂದವಾಯಿತು. "ರೈತ ರಕ್ಷಣಾ ಕಾಯಿದೆ" ಯನ್ನು ತರಲೂ ಬರಪರಿಹಾರ ಬೋರ್ಡ್ ಕೈಗೊಳ್ಳಲೂ ಕೇಂದ್ರ ಸರಕಾರದಜೊತೆ ವ್ಯವಹರಿಸಲುಅಧಿಕಾರಿಗಳು ಒಪ್ಪಿಕೊಂಡರು.

ಕಾಫಿಯ ಉತ್ಪಾದನಾ ವೆಚ್ಚವನ್ನು ನಿಶ್ಚಯಿಸಲು ರೈತರಿಂದ ಸಹಕಾರ, ಸಹಾಯಬೇಕೆಂದೂ,ಇದಕ್ಕಾಗಿಕೇಂದ್ರ ಸರಕಾರದ ಮೇಲೆ ಒಟ್ಟಾದ ಒತ್ತಾಯ ಹೇರಬೇಕೆಂದೂ ಬೋರ್ಡ್ ಅಧಿಕೃತರು ಈ ಸಮಯದಲ್ಲಿ ರೈತರಲ್ಲಿ ಮನವಿ ಮಾಡಿಕೊಂಡರು.

ಹೋರಾಟದಿಂದ ಕೆಲವು ಬದಲಾವಣೆಗಳನ್ನು ಉಂಟು ಮಾಡಲು ಸಾಧ್ಯವಾದರೂ ರೈತನ ಮುಖ್ಯ ಸಮಸ್ಯೆಗಳು ಇನ್ನೂ ಸಮಸ್ಯೆಗಳಾಗಿಯೇ ಉಳಿಯುವುದರಿಂದ ರೈತ ಸಮೂಹ ಒಟ್ಟಾಗಿ ಹೋರಾಟಕ್ಕೆ ಸಜ್ಜಾಗಬೇಕಾಗಿದೆ. ಈ ಹೋರಾಟದ ಯಶಸ್ಸು ಭಾರತದ ಎಲ್ಲಾ ಕಾಫಿ ಬೆಳಗಾರರಿಗೆ ದಕ್ಕುವುದಾದರೂ, ಎಲ್ಲಾ ಪ್ರದೇಶದ ರೈತ ಪ್ರಾತಿನಿಧ್ಯ ಈ ಹೋರಾಟಕ್ಕಿರಲಿಲ್ಲ ಎಂಬುದು ಕಂಡು ಬಂತು. ಭಾರತದಲ್ಲಿಯೇ ಹೆಚ್ಚು ಕಾಫಿ ಬೆಳೆಯುವ ಕರ್ನಾಟಕದ ರೈತರ ಪ್ರಾತಿನಿಧ್ಯ ಕಡಿಮೆ ಪ್ರಮಾಣದಲ್ಲಿದ್ದುದು ಗಮನಿಸಲ್ಪಡಬೇಕಾದದ್ದೇ.

ಕರ್ನಾಟಕದ ರೈತರೂ ದೊಡ್ಡ ಪ್ರಮಾಣದಲ್ಲಿ ಸಂಘಟಿತರಾಗಿ, ಈ ಹೋರಾಟದಲ್ಲಿ ಸಕ್ರಿಯ ಪಾತ್ರವಹಿಸುವುದಾದರೆ ಖಂಡಿತವಾಗಿಯೂ ಕಾಫಿ ಬೋರ್ಡಿನ ಮತ್ತು ಕೇಂದ್ರ ಸರಕಾರದ ತಪ್ಪಾದ ಧೋರಣೆಯನ್ನು ಬದಲಾಯಿಸುವಂತೆ ಮಾಡಬಹುದು ಮತ್ತು ನರಳುತ್ತಿರುವ ಬಡ ಸಣ್ಣ ಬೆಳೆಗಾರರನ್ನು ರಕ್ಷಿಸಬಹುದು.

ವರದಿ : ಲತೀಫ್

ಬಾಂಗ್ಲಾದೇಶ್ : ಪ್ರಜಾಪ್ರಭುತ್ವಕ್ಕಾಗಿ ತೀವ್ರ ಹೋರಾಟ

ಮಾರ್ಚ್ 1982 ರಲ್ಲಿ ಅಧಿಕಾರ ಕಿತ್ತುಕೊಂಡು ಗದ್ದುಗೆ ಹೇರಿದ ಬಾಂಗ್ಲಾ ದೇಶದ ಜನರಲ್ ಇರ್ಷಾದ್ ಪ್ರಜಾಪ್ರಭುತ್ವವಾದಿಗಳ ತೀವ್ರ ಸಾಮೂಹಿಕ ವಿರೋಧವನ್ನು ಈಗ ಎದುರಿಸುತ್ತಿದಾನೆ. 1982ರಲ್ಲಿ ಅಧಿಕಾರಕ್ಕೆ ಬಂದ ಕೂಡಲೇ ಲಷ್ಕರಿ ಶಾಸನ ಹೇರಿದ್ದ ಆತ ಕಳೆದ ವರ್ಷಹುಸಿ ಸಂಸತ್ ಚುನಾವಣೆಗಳನ್ನು ನಡೆಸಿ ಮಿಲಿಟರಿ ಆಡಳಿತಕ್ಕೆ ನಾಗರೀಕ ಮುಸುಕು ತೊಡಿಸುವಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ವಿಯಾದನು. ಯಾಕೆಂದರೆ ಆಗ ವಿರೋಧ ಪಕ್ಷಗಳಲ್ಲಿ ತೀವ್ರ ಅನೈಕ್ಯತೆಯಿತ್ತು.

ಆದರೆ ಈಗ ನವಂಬರ್ 10ರ "ಢಾಕಾ ಮುತ್ತಿಗೆ" ಯಿಂದ ಐಕ್ಯ ಚಳುವಳಿಯೊಂದು ಆರಂಭವಾಗಿದೆ. ಅವಾಮಿ ಲೀಗ್ ನೇತೃತ್ವದ ಎಂಟು ಪಕ್ಷಗಳ ಮಿತ್ರಕೂಟ, ಬಾಂಗ್ಲಾ ನ್ಯಾಶನಲಿಸ್ಟ್ ಪಾರ್ಟಿ ಮುಖಂತ್ವದ ಏಳು ಪಕ್ಷಗಳ ಮಿತ್ರ ಕೂಟ ಹಾಗೂ ಎಡಪರ ಐದು ಪಕ್ಷಗಳ ಮಿತ್ರಕೂಟ ಒಟ್ಟಾಗಿ ಈ ಚಳುವಳಿ ನಡೆಸುತ್ತಿದ್ದಾರೆ.

ಅರ್ಧ ದಿನದ ಮುಷ್ಕರಗಳಿಂದ 56 ಗಂಟೆಗಳವರೆಗಿನ ಭಿನ್ನ-ಭಿನ್ನ ಅವಧಿಯ ಮುಷ್ಕರಗಳು ಬಾಂಗ್ಲಾ ದೇಶ್‌ನ ಜನ ಜೀವನವನ್ನು, ಸರ್ಕಾರಿ ಕೆಲಸ ಕಾರ್ಯಗಳನ್ನು ಪೂರ್ಣವಾಗಿ ಅಸ್ತವ್ಯಸ್ತಗೊಳಿಸಿದವು. ಪೋಲೀಸರೊಂದಿಗೆ ಘರ್ಷಣೆ, ಮುಷ್ಕರಗಳಿಲ್ಲದ ದಿನವೇ ಇಲ್ಲ. ಕೇವಲ ಈ ಎರಡು ವಾರಗಳಲ್ಲೇ 25 ಜನ ಗುಂಡಿಗಾಹುತಿಯಾದವರು, 1443 ಮಂದಿ ಗಾಯಗೊಂಡರು ಹಾಗೂ 2373 ಮಂದಿ ಬಂಧಿತರಾದರು. ಎರಡು ವಿರೋಧಿ ಮಿತ್ರಕೂಟಗಳ ಮುಖಂಡರಾದಬೇಗಂ ಖಾಲಿದಾ ಹಾಗೂ ಬೇಗಂ ಶೇಖ್ ಹಸೀನಾರವರನ್ನು ನವಂಬರ್ 11ರಿಂದಲ್ಲೇ ಗೃಹ ಬಂಧನದಲ್ಲಿಟ್ಟರೂ, ಬಾಂಗ್ಲಾದೇಶ್ ಕಮ್ಯೂನಿಸ್ಟ್ ಪಕ್ಷದ ಮೇಲೆ ಪ್ರತಿಬಂಧ ಹೇರಿ ಅದರ ಮುಖ್ಯ ಕಚೇರಿಯಲ್ಲಿ ಇರ್ಷಾದ್ ಗೂಂಡಾಗಳು ಲೂಟಿ ನಡೆಸಿದರೂ ಚಳುವಳಿ ಮಿಲಿಟರಿ ಸರ್ವಾಧಿಕಾರಿಯ ಯಾವುದೇ ದಬ್ಬಾಳಿಕೆ ಕ್ರಮಕ್ಕೆ ಜಗ್ಗದೆ ಮುಂದುವರಿಯಿತು.

ಮೆರವಣಿಗೆಗಳು, ಪ್ರದರ್ಶನಗಳನ್ನು ಪ್ರತಿಬಂಧಿಸಿದ್ದರೂ ಢಾಕಾ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರು ಇರ್ಷಾದ್ ರಾಜೀನಾಮೆ ಒತ್ತಾಯಿಸಿ ಮೆರವಣಿಗೆ ನಡೆಸಿದರು. ವಿರೋಧ ಪಕ್ಷಗಳು ಪಂಜಿನ ಮೆರವಣಿಗೆ ನಡೆಸಿ ನವಂಬರ್ 29ರಿಂದ 72 ಗಂಟೆಗಳ ಮುಷ್ಕರಕ್ಕೆ ತಯಾರಿ ಆರಂಭಿಸಿದವು.

ನವಂಬರ್ 27ರಂದು ಎಲ್ಲಾ ಪ್ರತಿಬಂಧಕಾಜ್ಞೆಗಳನ್ನು ಮುರಿದು ವಿರೋಧ ಪಕ್ಷಗಳ ಮೂರು ಮಿತ್ರಕೂಟಗಳು ಜಂಟಿಯಾಗಿ ಏರ್ಪಡಿಸಿದ್ದ ದೊಡ್ಡ ರ್‍ಯಾಲಿಯಲ್ಲಿ ರಾಜಕೀಯ ಮುಖಂಡರಲ್ಲದೆ ಪ್ರಮುಖ ಬುದ್ಧಿ ಜೀವಿಗಳು, ಇಂಜಿನಿಯರುಗಳು, ವೈದ್ಯರು, ಕಲಾವಿದರೂ ಕೂಡಾ ಭಾಗವಹಿಸಿದರು. ರ್‍ಯಾಲಿ ಅಂಗೀಕರಿಸಿದ ಘೋಷಣೆಯಲ್ಲಿ ಈ ಆಂದೋಲನವನ್ನು ಒಂದು ಸಾಮೂಹಿಕ ಉತ್ಕ್ರಾಂತಿಯಾಗಿ ಪರಿವರ್ತಿಸಿ ಇರ್ಷಾದ್ ಸರ್ಕಾರವನ್ನು ಕೆಳಗಿಳಿಸಬೇಕೆಂದು ಕರೆ ನೀಡಲಾಯಿತು.

ಅದೇ ರಾತ್ರಿ ಭಯಭೀತ ಇರ್ಷಾದ್ ತುರ್ತು ಪರಿಸ್ಥಿತಿ ಹೇರಿದ. ಪತ್ರಿಕೆಗಳ ಬಾಯಿ ಮುಚ್ಚಿಸಿದ. ಆದರೆ ಜನ ಮತ್ತಷ್ಟು ಸಿಟ್ಟಿನಿಂದ ಧೈರ್ಯದಿಂದ ಬೀದಿಗಿಳಿದರು. 72 ಗಂಟೆಗಳ ಮುಷ್ಕರ ತಡೆಯಲು ಮಿಲಿಟರಿ ಸರ್ವಾಧಿಕಾರಕ್ಕೆ ಸಾಧ್ಯವಾಗಲಿಲ್ಲ. ಅಭೂತಪೂರ್ಣ ಪ್ರಮಾಣದಲ್ಲಿ, ಹಿಂದೆಂದೂ ಕಂಡಿರದ ಸಮರಶೀಲತೆಯಿಂದ ಬಾಂಗ್ಲಾ ದೇಶ್ ಜನತೆ ಹೋರಾಟ ಮುಂದುವರಿಸುತ್ತಿದ್ದಾರೆ.

ಸಂಕ್ಷಿಪ್ತ ಸುದ್ದಿಗಳು

ಕೊಸ್ಟಾರಿಕಾ ಅಧ್ಯಕ್ಷರಿಗೆ ನೋಬೆಲ್ ಪ್ರಶಸ್ತಿ

ಇದೇ ಆಗಸ್ಟ್ 7ರಂದು ನಡೆದ ಮಧ್ಯ ಅಮೇರಿಕಾ ದೇಶಗಳ ಶಾಂತಿ ಒಪ್ಪಂದ ರೂಪಿಸುವಲ್ಲಿ ಪ್ರಮುಖಪಾತ್ರವಹಿಸಿದ್ದ ಕೋಸ್ಟಾರಿಕಾದ ಅಧ್ಯಕ್ಷ ಆಸ್ಕರ್ ಅರಿಯಾಸ್ ಸಾಂಚೆಝ್‌ಗೆ 1987 ರ ನೋಬೆಲ್ ಪ್ರಶಸ್ತಿಯನ್ನು ಡಿಸೆಂಬರ್ 10ರಂದು ಒಸ್ಲೋದಲ್ಲಿ ಸ್ವೀಕರಿಸಿದರು.

ಕಳೆದ ಆಕ್ಟೋಬರ್‌ನಲ್ಲಿ ನೋಬಲ್‌ಸಮಿತಿ ತನ್ನ ಆಯ್ಕೆಯನ್ನು ಪ್ರಕಟಿಸಿದಾಗ ಅಧ್ಯಕ್ಷ ರೇಗನ್‌ರ ಬೆಂಬಲಿಗರು ಹಾಗೂ ನಿಕಾರಗುವಾದ ಸ್ಯಾಂಡಿನಿಸ್ಟಾ ಸರ್ಕಾರದ ವಿರೋಧಿಗಳು ಈ ಆಯ್ಕೆಯಿಂದಾಗಿ ನಿಕಾರಗುವಾದ ಕಾಂಟ್ರಾ ಚಳುವಳಿ ಮುಳುಗಿ ಹೋಗುತ್ತದೆಂದು ಸಿಟ್ಟಿಗೆದ್ದಿದ್ದರಂತೆ. ಅಮೇರಿಕದ ಸುದ್ದಿ ಸಂಸ್ಥೆ ಸಿ.ಬಿ.ಎಸ್. ಅದನ್ನು ವರದಿಮಾಡಿತ್ತು.

ಪಾಕ್‌ನಲ್ಲಿ ಮಿಲಿಟರಿ ಆಳ್ವಿಕೆ ಏಕೆ ಮುಂದುವರೆದಿದೆ?

ಕುವೈತ್‌ನ ಟ್ಯಾಂಕರ್‌ಗಳ ಕಾವಲಿಗೆಂಬ ನೆಪದಲ್ಲಿ ಈಗಾಗಲೇ ಪರ್ಶಿಯನ್ ಕೊಲ್ಲಿಯಲ್ಲಿ ನೂರುಯುದ್ಧ ಹಡಗುಗಳನ್ನು ಹೊಂದಿರುವ ಅಮೇರಿಕಾ ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವ ಮರು ಸ್ಥಾಪನೆಯಾಗಲು ಬಿಡುವುದಿಲ್ಲ ಎಂದು ಪಾಕಿಸ್ತಾನದ "ಪ್ರಜಾಪ್ರಭುತ್ವ ಮರುಸ್ಥಾಪನೆ ಆಂದೋಲನ"ದ ಅಧ್ಯಕ್ಷ ಹಾಗೂ ಪಾಕಿಸ್ತಾನ ರಾಷ್ಟ್ರೀಯ ಪಕ್ಷದ ಅಧ್ಯಕ್ಷ ಗೌಸ್ ಬಕ್ಸ್ ಬಿಝೆಂಜೋ ಹೇಳಿದ್ದಾರೆ. ಪಾಕಿಸ್ತಾನದಲ್ಲಿ ಯಾವುದೇ ಪ್ರಜಾಸತ್ತಾತ್ಮಕ ಸರ್ಕಾರ ಬಂದರೆ ಅಮೇರಿಕಾದ ಸಾಮರಿಕ ಹಿತಾಸಕ್ತಿಗಳಿಗೆ ಅಪಾಯ ತಟ್ಟುತದೆಂಬ ಭಯವೇ ಇದಕ್ಕೆ ಕಾರಣ.

ಸೋವಿಯೆತ್ ಒಕ್ಕೂಟದ ವಿರುದ್ಧ ಮಧ್ಯ ಪೂರ್ವದಿಂದ ದೂರಪ್ರಾಚ್ಯದವರೆಗೆ ತನ್ನ ಕೈಗೊಂಬೆ ಸರ್ಕಾರಗಳ ಮೂಲಕ ಅಮೇರಿಕಾ ಒಂದು ಸಾಮರಿಕ ಗೋಡೆ ನಿರ್ಮಿಸಲು ಪ್ರಯತ್ನಿಸುತ್ತಿದ್ದು, ಆ ಪ್ರಯತ್ನದಲ್ಲಿ ಭಾರತವನ್ನು ಅಸ್ಥಿರಗೊಳಿಸುವ ಪ್ರಯತ್ನವೂ ಸೇರಿದೆ ಎಂದು ಈ ಪಾಕಿಸ್ತಾನೀ ಮುಖಂಡ ಪಿ.ಟಿ.ಐ.ಗೆ ನೀಡಿರುವ ಸಂದರ್ಶನದಲ್ಲಿ ಎಚ್ಚರಿಸಿದ್ದಾರೆ.

ಸಿ. ಪಿ. ಐ. (ಎಂ) ಶುಭಾಶಯಗಳು

ಜಪಾನಿನ ರಾಜ ಪ್ರಭುತ್ವದ ಫ್ಯಾಸಿಸ್ಟ್ ಮಿಲಿಟರಿಶಾಹೀ ಹಲ್ಲೆಗಳಿಗೆ ತಲೆ ತಗ್ಗಿಸದೆ ಯಶಸ್ವಿಯಾಗಿ ಎದುರಿಸುತ್ತಿದ್ದ ಜಪಾನಿನ ಏಕ ಮಾತ್ರ ರಾಜಕೀಯ ಪಕ್ಷವೆಂದರೆ ಅಲ್ಲಿನ ಕಮ್ಯುನಿಸ್ಟ್ ಪಕ್ಷ. ಎರಡನೇ ಮಹಾಯುದ್ಧಾನಂತರವೂ ಶಾಂತಿಯ ಪರವಾಗಿ ಹಾಗೂ ಮಿಲಿಟರಿ ಶಾಹಿಯ ವಿರುದ್ಧ ಜನತಾ ಹೋರಾಟಕ್ಕೆ ಜಪಾನ್ ಕಮ್ಯುನಿಸ್ಟ್ ಪಕ್ಷ ನಿರಂತರ ಮುಖಂಡತ್ವ ನೀಡುತ್ತಾ ಬಂದಿದೆ. ಜಪಾನಿನ ಜನತೆಯ ಶಾಂತಿಯ ತೀವ್ರ ಅಭಿಲಾಷೆಯನ್ನು ಕಡೆಗಣಿಸಿ ಆ ದೇಶವನ್ನು ಏಷ್ಯಾ-ಶಾಂತ ಸಾಗರ ಪ್ರದೇಶದಲ್ಲಿ ಪ್ರತಿಗಾಮಿ ಪಾತ್ರ ವಹಿಸುವಂತೆ ಬಲವಂತ ಮಾಡಿರುವ ಜಪಾನ್-ಅಮೆರಿಕಾ ಭದ್ರತಾ ಸಂಧಿಯ ದುಷ್ಟ ಆಶಯಗಳನ್ನು ಸತತವಾಗಿ ಬಯಲಿಗೆಳೆಯುತ್ತಾ ಬಂದಿರುವ ಜಪಾನ್ ಕಮ್ಯೂನಿಸ್ಟ್ ಪಕ್ಷದ 18ನೇ ಮಹಾಧಿವೇಶನ ನವಂಬರ್ 25 ರಿಂದ 29ರವರೆಗೆ ನಡೆಯಿತು. ಇದಕ್ಕೆ ಸಿ.ಪಿ.ಐ (ಎಂ)ನ ಕೇಂದ್ರ ಸಮಿತಿ ತನ್ನ ಹಾರ್ದಿಕ ಶುಭಾಶಯಗಳನ್ನು ಕಳುಹಿಸಿದೆ. ಕೇಂದ್ರ ಸಮಿತಿ ಸದಸ್ಯ ಪ್ರಕಾಶಕಾರಟ್ ಸಿ.ಪಿ.ಐ.(ಎಂ) ಪರವಾಗಿ ಈ ಮಹಾಧಿವೇಶನದಲ್ಲಿ ಭಾಗವಹಿಸಿದರು.

ಡಿಸೆಂಬರ್ 1ರಿಂದ 4 ರವರೆಗೆ ತಾಂಜಾನಿಯಾದ ಅರುಷಾದಲ್ಲಿ ನಡೆದ "ದಕ್ಷಿಣ ಆಫ್ರಿಕಾದಲ್ಲಿ ಪ್ರಜಾಪ್ರಭುತ್ವಕ್ಕಾಗಿ ವಿಶ್ವದ ಜನತೆ" ಸಮ್ಮೇಳನ ಸಂದರ್ಭದಲ್ಲಿ ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್‌ಗೆ, ಯುಗೋಸ್ಲಾವಿಯಾ ಸಮಾಜವಾದೀ ಒಕ್ಕೂಟದ ಸ್ಥಾಪನೆಯ 44ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿಅಲ್ಲಿಯ ಜನತೆಗೆ ಹಾಗೂಯೆಮೆನ್ ಜನತಾ ಪ್ರಜಾಪ್ರಭುತ್ವ ಗಣತಂತ್ರದ ಸ್ವಾತಂತ್ರ್ಯ ದಿನದ ಸಂದರ್ಭದಲ್ಲಿ ಅಲ್ಲಿನ ಜನತೆಗೆ ಸಿ.ಪಿ.ಐ. (ಎಂ) ಕೇಂದ್ರ ಸಮಿತಿ ಶುಭಾಶಯ ಸಂದೇಶಗಳನ್ನು ಕಳುಹಿಸಿದೆ.

ಕೇರಳ : ಅವಿಶ್ವಾಸ ಸೂಚನೆ ಕಾಂಗ್ರೆಗೆ ತಿರುಗುಬಾಣ

ನವಂಬರ್ 23 ರಂದು ಕೇರಳದ ವಿರೋಧ ಪಕ್ಷ ಕಾಂಗ್ರೆ ಎಡ ಪ್ರಜಾಪ್ರಭುತ್ವ ರಂಗ ಸರ್ಕಾರದ ವಿರುದ್ಧ ಅವಿಶ್ವಾಸ ಸೂಚನೆ ಮಂಡಿಸಿತು ಅದನ್ನು ಮಂಡಿಸಿದ ದಿನವೇ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಮುಖ್ಯಮಂತ್ರಿ ಒತ್ತಾಯಿಸಿದಾಗ, ಕಾಂಗ್ರೆ ನಾಯಕರೇ ಅವಾಕ್ಕಾದರು. ಬಿರುಸಿನ ಚಕಮಕಿಯನ್ನು ಆಳುವ ರಂಗ, ನಿರೀಕ್ಷಿಸಿದರೆ, ಸದನದ ಒಳಗೆ ಹೊರಗೆ ಕಾಂಗ್ರೆ ಮತ್ತು ಅದರ ಸಮರ್ಥಕ ಬಲಪಂಥೀಯ ಪತ್ರಿಕೆಗಳು (ಮಲಯಾಳ ಮನೋರಮ, ಮಾತೃಭೂಮಿ) ಕಳೆದ ಎಂಟು ತಿಂಗಳಿಂದ ಪಠಣ ಮಾಡುತ್ತಿರುವ ಸಪ್ಪೆ ನಿರ್ವೀರ್ಯ ಆಪಾದನೆಗಳ ಪುನರಾವರ್ತನೆ. ಅವಿಶ್ವಾಸ ಸೂಚನೆ ಯಾವುದೇ ಒಂದು ಮಂತ್ರಿಯ ವಿರುದ್ಧ ಭ್ರಷ್ಟಾಚಾರ ಪ್ರಕರಣ ಎತ್ತಿ ತೋರಿಸಲು ಸಾಧ್ಯವಾಗದಿದ್ದರೂ, ಸುಮ್ಮನೆ "ಭ್ರಷ್ಟಾಚಾರ ಹೆಚ್ಚುತ್ತಿದೆ" ಎಂದು ಆಪಾದಿಸುವ ಧೈರ್ಯ ತೋರಿದೆ. ತನ್ನ ಮಾಜಿ ಮಂತ್ರಿಗಳು ಎದುರಿಸುತ್ತಿರುವ ಭ್ರಷ್ಟಾಚಾರ ವಿಚಾರಣೆ, ಕೇಂದ್ರ ಸರ್ಕಾರದ ಭ್ರಷ್ಟಾಚಾರ ಪ್ರಕರಣಗಳ ಹಿನ್ನೆಲೆಯಲ್ಲಿ ಇಂತಹ ಆಪಾದನೆಯನ್ನು ಯಾರೂ ನಂಬುವುದಿಲ್ಲ ಎಂದೂ ಅವರಿಗೆಚೆನ್ನಾಗಿ ಗೊತ್ತಿತ್ತು. ಆದ್ದರಿಂದ ಸೂಚನೆ ಭ್ರಷ್ಟಾಚಾರವಲ್ಲದೆ, ಟರ್ನ್ ಓವರ್-ಟ್ಯಾಕ್ಸ್‌ನಿಂದಾಗಿ ಬೆಲೆ ಏರಿಕೆ, ರಾಜ್ಯ ಸರ್ಕಾರದ ಆರ್ಥಿಕ ಮುಗ್ಗಟ್ಟು, ಕಾನೂನು ವ್ಯವಸ್ಥೆ ಹದಗೆಟ್ಟಿರುವುದು, ಚುನಾವಣಾ ಭರವಸೆಗಳನ್ನು ಪೂರೈಸದಿರುವುದು ಇತ್ಯಾದಿಗಳನ್ನು ಸೇರಿಸಿದೆ.

ಆಳುವ ರಂಗದ ಸದಸ್ಯರು ಈ ಸುಳ್ಳು ಆಪಾದನೆಗಳಿಗೆ ಬಿರುಸಿನ ಮಾರುತ್ತರಗಳನ್ನು ನೀಡಿದರು. ಟರ್ನ್ ಓವರ್‌ನಿಂದಲೇ ಬೆಲೆ ಏರಿದ್ದರೆ ಉಳಿದ ಕಾಂಗ್ರೆ-ರಾಜ್ಯಗಳಲ್ಲಿ ಮತ್ತು ದೇಶದ ತುಂಬೆಲ್ಲಾ ಬೆಲೆಯಾತರಿಂದ ಏರಿದೆ ಎಂದು ಪ್ರಶ್ನಿಸಲಾಯಿತು. ಬೆಲೆ ಏರಿಕೆ ಕೇಂದ್ರದಲ್ಲಿ ಕಾಂಗ್ರೆನ ತಪ್ಪು ಆರ್ಥಿಕ ಧೋರಣೆಗಳಿಂದ ಎಂದು ಎತ್ತಿ ತೋರಿಸಲಾಯಿತು. ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ಯೋಜನಾ ಮೊತ್ತ ಮತ್ತು ರಾಜ್ಯ ತನ್ನದೇ ಸಂಪನ್ಮೂಲಗಳನ್ನು ಎತ್ತಲುಮಾಡುತ್ತಿರುವ ಪ್ರಯತ್ನ (ಟರ್ನ್-ಓವರ್ ಟ್ಯಾಕ್ಸ್ ಇತ್ಯಾದಿ) ಗಳಿಗೆ ಒಂದು ಕಡೆ ಅಡ್ಡಗಾಲು ಹಾಕಿ, ಮತ್ತೊಂದು ಕಡೆ ಆರ್ಥಿಕ ದುರವಸ್ಥೆ, ಬೆಳವಣಿಗೆ ಕಾರ್ಯಗಳು ಜಾರಿಯಾಗಿಲ್ಲ ಎಂಬ ಕಾಂಗ್ರೆ ಕೂಗಿನ ಹಿಂದಿರುವ ಇಬ್ಬಂದಿತನ ಬಯಲಿಗೆಳೆಯಲಾಯಿತು. ಕಾನೂನು ವ್ಯವಸ್ಥೆ ಮತ್ತು ಕೋಮು ಸೌಹಾರ್ದತೆ ಕಾಂಗ್ರೆ-ರಾಜ್ಯಗಳಿಗಿಂತಎಷ್ಟೋ ಉತ್ತಮ ಮಟ್ಟದಲ್ಲಿದೆ ಎಂದು ಅಂಕಿ ಅಂಶಗಳ ಮೂಲಕ ವಿವರಿಸಲಾಯಿತು. 20 ಕೋಟಿ ಕೊರತೆ ಬಿಟ್ಟು ಹೋದ ಹಿಂದಿನ ಸರ್ಕಾರದ ದುರಾಡಳಿತವನ್ನು ಎಂಟು ತಿಂಗಳಲ್ಲಿ ಸಾಕಷ್ಟು ಸುಧಾರಿಸಲಾಗಿದೆ.

ವಿಧಾನ ಸಭೆಯಲ್ಲಿ ಕಾಂಗ್ರೆ ಮಂಡಿಸಿದ ಅವಿಶ್ವಾಸ ಸೂಚನೆ 59-79 ಮತಗಳಿಂದ ಬಿದ್ದು ಹೋಯಿತು. ○

ಮಹಾರಾಷ್ಟ್ರ : ನಾಗಪುರದಲ್ಲಿ ಎಡಪಕ್ಷಗಳ 50,000 ಜನರ ರ್‍ಯಾಲಿ

ನಾಗಪುರ ಮಹಾರಾಷ್ಟ್ರದ ರಡನೇ ರಾಜಧಾನಿ. ನವಂಬರ್ 16 ರಂದು ಈ ನಗರ ಕೆಂಪು ಪತಾಕೆ, ಬ್ಯಾನರುಗಳಿಂದ ಮುಚ್ಚಿಹೋಗಿಕೆಂಪಗಾಗಿತ್ತು. ಈ ದಿನ ಡಿಸೆಂಬರ್ 9 ರ ರ್‍ಯಾಲಿಗೆ ಪೂರ್ವಭಾವಿಯಾಗಿ ಎಡ ಪಕ್ಷಗಳು ರಾಜ್ಯ ವಿಧಾನ ಸಭೆಯ ಅಧಿವೇಶನದ ಎದುರು ಸಂಘಟಿಸಿದ ಅಭೂತಪೂರ್ವ ಮತ ಪ್ರದರ್ಶನ, ರ್‍ಯಾಲಿಯಲ್ಲಿ 50,000 ದುಡಿಯುವ ಜನ ಭಾಗವಹಿಸಿದರು. ಇದು ಈವರೆಗಿನ ಎಡಪಕ್ಷಗಳ ಜಂಟಿ ರ್‍ಯಾಲಿಗಳಲ್ಲಿ ಅತ್ಯಂತದೊಡ್ಡದಾಗಿತ್ತು. ಈ ರ್‍ಯಾಲಿ ರಾಜೀವ ಗಾಂಧಿ ಸರ್ಕಾರದ ರಾಜೀನಾಮೆ ಮತ್ತು ಮಧ್ಯಂತರ ಚುನಾವಣೆಯ ಬೇಡಿಕೆಗಳನ್ನು ಒಕ್ಕೊರಲಿನಿಂದ ಸಾರಿತು.

ಈ ರ್‍ಯಾಲಿಗಿಂತ ಮೊದಲು ರಾಜ್ಯದ ತುಂಬಾ ಎಡಪಕ್ಷಗಳು ಈ ಬೇಡಿಕೆ ಮತ್ತು ಜನರ ದೈನಂದಿನ ಬೇಡಿಕೆಗಳ ಬಗ್ಗೆ ಪ್ರಚಾರ ಪ್ರಕ್ಷೋಭೆನಡೆಸಿದ್ದರು. ಮುಖ್ಯವಾಗಿ ಸಿ.ಪಿ.ಐ.(ಎಂ) ಹಾಗೂ ಸಿ.ಪಿ.ಐ. ಮತ್ತು ಅವುಗಳ ಸಾಮೂಹಿಕ ಸಂಘಟನೆಗಳು 28 ಜಿಲ್ಲೆಗಳಿಂದ ರ್‍ಯಾಲಿಗೆ ಜನರನ್ನು ತರಲು ಕೆಲಸ ಮಾಡಿದ್ದವು. 'ರಾಜೀವ್ ಹಟಾವೋ ಚಳುವಳಿ ಮತ್ತು ಕಮ್ಯುನಿಸ್ಟರು" ಎಂಬ ರಾಜ್ಯ ಸಿ. ಪಿ. ಐ. (ಎಂ) ಕಾರ್ಯದರ್ಶಿಪ್ರಭಾಕರ ಸಾಂಝಗೀರಿ ಬರೆದ ಪುಸ್ತಿಕೆ 10000 ಪ್ರತಿಗಳು ಮತ್ತು ಕೇಂದ್ರ ಸಮಿತಿಯ ಆಗಸ್ಟ 17 ನಿರ್ಣಯಗಳ ಮರಾಠಿ ಭಾಷಾಂತರದ ಸಾವಿರಾರು ಪ್ರತಿಗಳುರ್‍ಯಾಲಿಮತ್ತು ಅದರ ಮೊದಲು ಮಾರಾಟವಾದವು.

ನವಂಬರ್ 16 ರಂದು ಮೆರವಣಿಗೆ ಸುಮಾರು 8 ಕಿ.ಮೀ. ಉದ್ದವಿದ್ದು 3 ಗಂಟೆಗಳ ಕಾಲ ನಾಗಪುರದ ಮುಖ್ಯ ಬೀದಿಗಳಲ್ಲಿ ಹಾದು ರಸ್ತೆ ಸಂಚಾರ ಅಸ್ತವ್ಯಸ್ತಗೊಂಡಿತು. ರ್‍ಯಾಲಿಯಲ್ಲಿ ಎಡ ಪಕ್ಷಗಳ ರಾಜ್ಯ ನಾಯಕರುಗಳಲ್ಲದೆ, ಕಾ|| ಸುರ್ಜಿತ್ ಸೇರಿದಂತೆ ಕೇಂದ್ರನಾಯಕರೂ ಭಾಗವಹಿಸಿದ್ದರು ಆರ್.ಎಸ್.ಎಸ್. ಕೇಂದ್ರವಾದ ನಾಗಪುರದಲ್ಲಿ ನಡೆದ ರ್‍ಯಾಲಿ ರಾಜ್ಯದ ಕೋಮುವಾದಿ, ವಿಚ್ಛಿದ್ರಕಾರಿ ಶಕ್ತಿಗಳಿಗೆ ದುಡಿಯುವ ವರ್ಗದ ಎಚ್ಚರಿಕೆಯಾಗಿತ್ತು. ಅದೇ ದಿನ ನಾಗಪುರದಲ್ಲೇ ಅಂಬೇಡ್ಕರ್ ಪುಸ್ತಕದ ವಿರುದ್ಧ ಪ್ರದರ್ಶನ ನಡೆಸಿದಮರಾಠಾ ಮಹಾಸಂಘದ ಜನಬಲ, ಎಡ ರ್‍ಯಾಲಿಯ ಹತ್ತನೆಯ ಒಂದು ಭಾಗದಷ್ಟು ಇರಲಿಲ್ಲ. ಈ ಎರಡು ರ್‍ಯಾಲಿಯ ಸಮರ್ಥಕರು ನಾಗಪುರ ರ್‍ಯಾಲಿಗೆ ಹೋಗುವಾಗ, ಬರುವಾಗ ನಡೆದ ಸಣ್ಣ ಘರ್ಷಣೆಗಳು, ಮುಂದೆ ಈ ಎರಡುಶಕ್ತಿಗಳ ನಡುವೆ ನಡೆಯುವ ರಾಜಕೀಯ ಘರ್ಷಣೆಗೆ ಮುನ್ಸೂಚನೆಯೋ ಎಂಬಂತಿತ್ತು.

ಕಂಬನಿದಪ್ತ ಬೀಳ್ಕೊಡುಗೆ

(1ನೇ ಪುಟದಿಂದ)
ಪಕ್ಷದ ಪಾಲಿಟ್‌ಬ್ಯೂರೋದ ಪರವಾಗಿ ಕಾಂ. ಬಿ.ಟಿ ಆರ್.ರವರು ಪುಷ್ಪ ಗುಚ್ಛಗಳನ್ನರ್ಪಿಸಿ ಶ್ರದ್ಧಾಂಜಲಿ ಸಲ್ಲಿಸಿದರೆ, ಕರ್ನಾಟಕದ ರಾಜ್ಯ ಸಮಿತಿಯನ್ನು ಪ್ರತಿನಿಧಿಸಿ ಕಾಂ ಸೂರ್ಯನಾರಾಯಣರಾವ್ ಪುಷ್ಪ ಗುಚ್ಛವನ್ನರ್ಪಿಸಿದರು. ಈ ಸಂದರ್ಭದಲ್ಲಿ ರಾಜ್ಯ ಸಮಿತಿ ಸದಸ್ಯರಾದ ಕಾಂ ಟಿ ಎಸ್. ಮಣಿ, ಕಾಂ. ಪಿ ಕೆ. ಸುಬ್ರಮಣಿಯವರೂ ಹಾಜರಿದ್ದರು. ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ.ಪಿ. ರಾಮಚಂದ್ರರಾವ್‌ರವರು ತಮ್ಮ ಶೋಕ ಸಂದೇಶವನ್ನು ಕಳುಹಿಸಿದ್ದಾರೆ.

ಭಾರತದ ಅಧ್ಯಕ್ಷರ ಪರವಾಗಿ, ತಮಿಳು ನಾಡಿನ ರಾಜ್ಯಪಾಲರ ಪರವಾಗಿ ಪುಷ್ಪ ಗುಚ್ಛಗಳು ಅರ್ಪಿಸಲ್ಪಟ್ಟವು. ತಮಿಳುನಾಡಿನ ಎಲ್ಲಾ ಪಕ್ಷಗಳ ನಾಯಕರೂ ಸಾಲುಗಟ್ಟಿ ನಿಂತು ತಮ್ಮ ಗೌರವವನ್ನರ್ಪಿಸಿದರು. ಅವರಲ್ಲಿ ಪ್ರಮುಖರಾದವರು ಅಣ್ಣಾ ಡಿ ಎಂ.ಕೆ ಮಂತ್ರಿ ಮಂಡಳದಲ್ಲಿ ಸಮಾಜ ಕಲ್ಯಾಣ ಮಂತ್ರಿಗಳಾದ ಆರ್. ಸೌಂದರರಾಜನ್, ಸಿ ಪಿ ಐ. ರಾಜ್ಯ ಕಾರ್ಯದರ್ಶಿ ಪಿ ಮಾಣಿಕ್ಯಂ, ತಮಿಳು ನಾಡು ಕಾಂಗ್ರೆಸ್ (ಐ) ಉಪಾಧ್ಯಕ್ಷರಾದ ಎ.ಆರ್ ಮಾರಿಮುತ್ತು, ಅಣ್ಣಾ ಡಿ ಎಂ.ಕೆ ಉಪಪ್ರಧಾನ ಕಾರ್ಯದರ್ಶಿಯಾದ ಎಸ್ ರಾಘವಾನಂದ ಇವರು ಪ್ರಮುಖರು.

ತಮಿಳುನಾಡು ರಾಜ್ಯಸಮಿತಿಯ ಕಾರ್ಯದರ್ಶಿ ಕಾಂ. ನಲ್ಲ ಶಿವಂರವರು ಚಿತೆಗೆ ಅಗ್ನಿ ಸ್ಪರ್ಶ ಮಾಡಿದರು.

ದಿವಂಗತ ಕಾಂ. ರಾಮಮೂರ್ತಿಯವರಿಗೆ ಪತ್ನಿ ಹಾಗೂ ಇಬ್ಬರು ಪುತ್ರಿಯರಿದ್ದಾರೆ.

ಕಮ್ಯೂನಿಸ್ಟ್ ಚಳುವಳಿಯ ಅಗ್ರಗಣ್ಯ ನೇತಾರ

(1ನೇ ಪುಟದಿಂದ)
ದಲ್ಲಿಮೂವತ್ತರ ದಶಕದಲ್ಲಿ ಮಧುರೆ, ಕೊಯಂಬತ್ತೂರುಗಳ ಗಿರಣಿ ಕಾರ್ಮಿಕರ ಮಧ್ಯೆ, ಮದ್ರಾಸ್ ಪ್ರಾಂತದ ರೈಲ್ವೆ ಕಾರ್ಮಿಕರ ಮಧ್ಯೆ ದುಡಿಯುವಾಗಿರಲಿ, ಮುಂದೆ 1970ರಲ್ಲಿ ಸಿ ಐ. ಟಿ.ಯು. ಸ್ಥಾಪಿಸುವಾಗ, ಅದರ ಮೊದಲ 14 ವರ್ಷಗಳ ಕಾಲ ಕಾರ್ಯದರ್ಶಿಯಾಗಿ ಸಿ.ಐ.ಟಿ.ಯು. ಬೆಳೆಸುವಾಗಿರಲಿ, ಈ ಸಂಘಟನಾಚಾತುರ್ಯ ಉತ್ಸಾಹಗಳು ಹೊರ ಹೊಮ್ಮುತ್ತಿದ್ದವು. ಕಾರ್ಮಿಕ ವರ್ಗವನ್ನು ಉಕ್ಕಿನಂತೆ ಗಟ್ಟಿಯಾಗಿಸಲು ದುಡಿಯುತ್ತಿದ್ದವು.

ಬನಾರಸ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಚಳುವಳಿಗೆ ಧುಮುಕಿ 1930ರ ಸಮಯದಲ್ಲಿನ ಉಪ್ಪಿನ ಸತ್ಯಾಗ್ರಹವೆಂದು ಹೆಸರಾದ ಕರನಿರಾಕರಣೆಯ ವೀರ ಚಳುವಳಿಯಲ್ಲಿ ಬಂಧನಕ್ಕೊಳಗಾದವರು. ಈ ಚಳುವಳಿಯನ್ನು ಮುಂದುವರಿಸಿ ಸಂಪೂರ್ಣ ಸ್ವಾತಂತ್ರ್ಯದತ್ತ ಮುನ್ನಡೆಸಲು ಹಿಂಜರಿದು ಗಾಂಧೀಜೀ ಈ ಚಳುವಳಿಯನ್ನು ಹಿಂತೆಗೆದುಕೊಂಡಾಗ ಅತೃಪ್ತರಾದ ಲಕ್ಷಾಂತರ ಸ್ವಾತಂತ್ರ್ಯ ಹೋರಾಟಗಾರರ ನೇತೃತ್ವ ವಹಿಸಿದವರಲ್ಲಿ ಕಾ. ರಾಮಮೂರ್ತಿಯವರೂ ಪ್ರಮುಖರು. ಆಗ ರೂಪುಗೊಂಡ ಕಾಂಗ್ರೆಸ್ ಸಮಾಜವಾದಿ ಪಕ್ಷಕ್ಕೆ ತಮಿಳುನಾಡಿನಲ್ಲಿ ಮುಖ್ಯ ಆಧಾರ ಸ್ತಂಭವಾದರು. ಮುಂದೆ ದುಡಿಯುವ ವರ್ಗದ ವಿಮೋಚನೆಗಾಗಿ ಸಮತಾವಾದವೊಂದೇ ಗುರಿಯೆಂದು ನಂಬಿದವರು.

ಕಾರ್ಮಿಕ ವಿರೋಧಿ ಸಿದ್ಧಾಂತಗಳ ವಿರುದ್ಧ ಸಿಡಿಲಾಗಿ ಮೊಳಗಿದವರು. ಪ್ರತಿಗಾಮಿಗಳ ಮೆದುಳಾದ ರಾಜಾಜಿಯಂತಹ ಬುದ್ಧಿ ಮತ್ತರನ್ನು ಎದುರಿಸಿದವರು. 1952ರಲ್ಲಿ, ಭಾರತದ ಮೊತ್ತ ಮೊದಲ ಚುನಾವಣೆಯಲ್ಲಿ ಸೆರೆಮನೆಯಲ್ಲಿದ್ದೇ ಚುನಾಯಿತರಾಗಿ ಇಡೀ ಮದ್ರಾಸ್ ಪ್ರಾಂತವೇ ಬೆರಳು ಕಚ್ಚುವಂತೆ ಮಾಡಿದರು.

ಭಾರತದ ಕಮ್ಯುನಿಸ್ಟ್ ಚಳುವಳಿಯಲ್ಲಿ ಪರಿಷ್ಕರಣವಾದ ತಲೆಯೆತ್ತುತ್ತಿದ್ದ ಆರಂಭದ ದಿನಗಳಲ್ಲಿಯೇ ಅದಕ್ಕೆ ಸವಾಲೊಡ್ಡಿ ಸೆಣಸಿದವರು. 1960ರ ಆರನೇ ಮಹಾಧಿವೇಶನದಲ್ಲಿ ಜನತಾ ಪ್ರಜಾಪ್ರಭುತ್ವಕ್ರಾಂತಿಯಕಾರ್ಯಕ್ರಮವನ್ನು ಪಕ್ಷದಮುಂದಿಟ್ಟವರು. ಮುಂದೆ ಸಿ.ಪಿ.ಐ (ಎಂ)ನಲ್ಲಿಪಾಲಿಟ್‌ಬ್ಯೂರೋ ಸದಸ್ಯರಾಗಿರುವವರೆಗೂ ಪರಿಷ್ಕರಣವಾದ ಎಡ ಪಂಥವಾದದ ವಿರುದ್ಧ ಸೆಣಸಿದರು. ಸಿ.ಪಿ.ಐ.(ಎಂ)ಅಗ್ರಗಣ್ಯ ನಾಯಕರಲ್ಲೊಬ್ಬರು.

ಮದ್ರಾಸಿನ ವಿಧಾನಸಭೆಯಲ್ಲಿ, ಮುಂದೆ ಲೋಕಸಭೆಯಲ್ಲಿ ಹಾಗೂ ರಾಜ್ಯಸಭೆಯಲ್ಲಿ ಉತ್ತಮ ಸಂಸದೀಯ ಪಟುವಾಗಿ, ಶತ್ರುಗಳೂ ಮೆಚ್ಚುವಂತೆ ವಾದಿಸುತ್ತಿದ್ದವರು. ಜನತಾ ಸರ್ಕಾರದಲ್ಲಿ ಜಾರ್ಜ್‌ಫರ್ನಾಂಡೀಸರ ಬಹುರಾಷ್ಟ್ರೀಯ ಕಂಪನಿಗಳ ವಿರೋಧಿ ಎಂಬ ಕಣ್ಕಟ್ಟು ನಾಟಕವನ್ನು ಬಿಚ್ಚಿ ನಗ್ನಸತ್ಯವನ್ನು ಬಯಲಿಗಿಟ್ಟವರು. "ಭೆಲ್ ಕಾರ್ಖಾನೆ ಯಾರಿಗಾಗಿ" ಎಂದು ಗರ್ಜಿಸಿ ಸೀಮೆನ್ಸ್ ಕಂಪನಿಯ ಜೊತೆಗಿನ ಕುತ್ಸಿತ ಒಪ್ಪಂದವನ್ನು ಹೊರಗೆಳೆದವರು.

ಕರ್ನಾಟಕದಲ್ಲಿ ಪಕ್ಷದಬೆಳವಣಿಗೆಗೆ, ಕಾರ್ಮಿಕ ವರ್ಗದ ಚಳುವಳಿಯ ಬೆಳವಣಿಗೆಗೆ ಅಪಾರ ಕಾಣಿಕೆ ನೀಡಿದವರು. ಕೆ.ಜಿ.ಎಫ್.ನ ಬಂಗಾರದ ಗಣಿ ಕಾರ್ಮಿಕರ ಸಂಘಟನೆಯಲ್ಲಿ ಬೆಂಗಳೂರಿನ ಹತ್ತಿಗಿರಣಿ ಕಾರ್ಮಿಕರ ಸಂಘಟನೆಯಲ್ಲಿ ತೀರಾ ಮೊದಲಿಂದಲೇ ಆಸಕ್ತಿ ವಹಿಸಿದರು. ಹಾಗೆಯೇ ಪಕ್ಷದ ಸಂಘಟನೆಯನ್ನು ದೃಢಗೊಳಿಸುವಲ್ಲಿ, ಪಕ್ಷದೊಳಗೆ ವಿಪರೀತ ಹಾನಿ ಮಾಡುತ್ತಿದ್ದ ಪಕ್ಷ ವಿರೋಧಿ ಸಿದ್ಧಾಂತಗಳ ವಿರುದ್ಧ ಹೋರಾಡಲು ನೆರವು ನೀಡಿದವರು. ಇತ್ತೀಚಿಗೆ 1984ರ ಅಂತ್ಯದಲ್ಲಿ ಬೆಂಗಳೂರಿನಲ್ಲಿಯೇ ಚಿಕಿತ್ಸೆಗಾಗಿ ಬಂದು ನೂರಾರು ಸಂಗಾತಿಗಳಿಗೆ ಪ್ರಿಯವಾದವರು.

○

ದೇಶದ ಐಕ್ಯತೆ ಹೋರಾಟ

ಕೊಡುತ್ತಿದೆ. 1983-84 ರಲ್ಲಿ ಬಿ.ಜೆ.ಪಿ.ಯನ್ನು ಬಿಟ್ಟು ಇತರ ವಿರೋಧ ಪಕ್ಷಗಳೆಲ್ಲ ಸೇರಿ 17ಅಂಶದ ಕಾರ್ಯಕ್ರಮದ ತಳಹದಿಯಲ್ಲಿ ರಾಜೀವಗಾಂಧಿ ಸರಕಾರದ ವಿರುದ್ಧ ಸಂಯುಕ್ತ ಚಳುವಳಿ ನಡೆಸುವ ನಿರ್ಧಾರಕ್ಕೆಗೊಂಡಿವೆ. ಆ ಚಳುವಳಿಯನ್ನು ಬಲಪಡಿಸುವ, ತೀವ್ರ ಮುಂದುವರಿಸುವ ಅವಶ್ಯಕತೆ ಈಗ ಹೆಚ್ಚಾಗುತ್ತಿದೆ. ಕೇಂದ್ರದಿಂದ ರಾಜ್ಯ ಸರಕಾರಗಳಿಗಾಗುತ್ತಿರುವ ಅನ್ಯಾಯ ಮಿತಿಮೀರಿದ್ದು ಐಕ್ಯಹೋರಾಟವಿಲ್ಲದೆ ಕೇಂದ್ರದಿಂದ ನ್ಯಾಯ ಪಡೆಯಲು ಸಾಧ್ಯವಿಲ್ಲೆಂಬ ತಿಳುವಳಿಕೆ ಎಲ್ಲ ಕಾಂಗ್ರೆಯೇತರ ಮುಖ್ಯಮಂತ್ರಿಗಳಲ್ಲಿಮೂಡಿಬಂದಿರುವುದುಸ್ವಾಗತಾರ್ಹ. ರಾಜಕೀಯ ಅಸ್ತಿತ್ವವನ್ನು ಉಳಿಸಿಕೊಳ್ಳಲು ಬಂಡವಾಳದಾರ ಜಮಿನ್ದಾರರ ಹಿತ ಸಾಧಿಸಲು ರಾಜೀವಗಾಂಧಿ ಎಂಥ ಹೀನಕೃತ್ಯ ಕೈಗೊಳ್ಳುವುದನ್ನು ನಾಚುವುದಿಲ್ಲೆಂಬ ಸಂಗತಿ ಇತ್ತೀಚಿನ ಘಟನೆಗಳು ತೋರಿಸಿಕೊಟ್ಟವೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಒತ್ತಿ ಒತ್ತಿ ಹೇಳುತ್ತಿರುವಂತೆ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಆಂದೋಲನ ಪ್ರಬಲವಾಗಿ ಬೆಳೆದುಬರುವಂತೆ ಶ್ರಮಿಸೋಣ.

ಸರ್ಕಾರಿ ದುಂದು ವೆಚ್ಚ ನಿಲ್ಲಿಸಿ

ಸಿ. ಐ.ಟಿ.ಯು ಖಜಾಂಚಿ ಮತ್ತು ಪೌರ ಕಾರ್ಮಿಕರ ಒಕ್ಕೂಟದ ಅಧ್ಯಕ್ಷರಾದ ಎನ್. ಕೆ. ಉಪಾಧ್ಯಾಯ ಬಿಜಾಪುರದಲ್ಲಿ ಹೊರಡಿಸಿದ ಪತ್ರಿಕಾ ಹೇಳಿಕೆಯಲ್ಲಿ, ಸರಕಾರ ನೌಕರರ ಹಾಗೆಯೇ ಸರಕಾರದ ಸಹಾಯದಿಂದ ನಡೆಯುವ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರೆಲ್ಲಾ ತಮ್ಮ ಪಗಾರದಲ್ಲಿ ಶೇ. 10·/. ರಷ್ಟು "ಸ್ವಯಂ ಸ್ಫೂರ್ತಿ" ಉಳಿತಾಯಮಾಡಬೇಕೆಂದು ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆಯವರು ಸೂಚಿಸಿರುವುದನ್ನು ಖಂಡಿಸಿದ್ದಾರೆ.

(1 ನೇ ಪುಟ ದಿಂದ)
ಸಂಘಟನೆಗೆ ದುಡಿದರು ಎಂದು ಪಾಲಿಟ್‌ಬ್ಯೂರೋ ಹೇಳಿಕೆ ಸ್ಮರಿಸಿಕೊಳ್ಳುತ್ತದೆ.

ತಮ್ಮ ಬಹುಮುಖ ಪ್ರತಿಭೆ ಹಾಗೂ ಮಾರ್ಕ್ಸ್‌ವಾದ—ಲೆನಿನ್‌ವಾದದ ಆಳವಾದ ತಿಳಿವಳಿಕೆಯಿಂದಾಗಿ ಅವಿಭಕ್ತ ಕಮ್ಯುನಿಸ್ಟ್ ಪಕ್ಷದಲ್ಲೇ ಆಗ್ರಪಂಕ್ತಿಗೇರಿದ ಕಾ॥ ಪಿ. ಆರ್. ಗೆ ತಿಳಿಯದ ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ಯಾವ ಚಟುವಟಿಕೆಯೂ ಇರಲಿಲ್ಲ.

ಜನ ನಾಯಕ, ಕಾರ್ಮಿಕ ಆಂದೋಲನದ ಸಂಘಟಕ, ಅತ್ಯುತ್ತಮ ವಾಗ್ಮಿ, ಸಂಸದೀಯ ಪಟು ಹಾಗೂ ಪರಿಣಾಮಕಾರಿ ಪತ್ರಿಕಾಕರ್ತರಾಗಿದ್ದ ಕಾ॥ ಪಿ. ಆರ್. ಸಿ. ಐ. ಟಿ. ಯು. ವನ್ನು ಕಟ್ಟಿ ಬೆಳಸಲು ತಮ್ಮ ಜೀವನವನ್ನೇ ಮುಡಿಪಾಗಿಟ್ಟರು ಎಂದು ಹೇಳಿರುವ ಪಾಲಿಟ್‌ಬ್ಯೂರೋ ದ್ರಾವಿಡ ಚಳುವಳಿಯ ಬಗ್ಗೆ ಅವರು ಬರೆದಿರುವ ಗ್ರಂಥ ಈಗಲೂ ಜನರಿಗೆ ಮಾರ್ಕ್ಸ್‌ವಾದೀ ದೃಷ್ಟಿ ಕೋನ ನೀಡುವ ಒಂದು ಕೃತಿಯಾಗಿದ್ದು ಅವರ ಬದುಕಿಗೊಂದು ಉದಾಹರಣೆ ಎಂದಿದೆ.

ಕರ್ನಾಟಕ ರಾಜ್ಯ ಸಮಿತಿಯ ಸಂತಾಪ

ಭಾರತ ಕಮ್ಯುನಿಸ್ಟ್‌ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯಸಮಿತಿ ಸೆಕ್ರಟಾರಿಯೇಟ್ ಸದಸ್ಯರಾದ ಸಿ. ನಂಜುಂಡಪ್ಪನವರು ಕೆಳಕಂಡ ಪತ್ರಿಕಾ ಹೇಳಿಕೆಯನ್ನು ನೀಡಿದ್ದಾರೆ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ, ಕರ್ನಾಟಕ ರಾಜ್ಯ ಸಮಿತಿಯು ಕಾಮ್ರೇಡ್ ಪಿ. ರಾಮಮೂರ್ತಿಯವರ ನಿಧನಕ್ಕೆ ತನ್ನ ತೀವ್ರ ಸಂತಾಪ ವ್ಯಕ್ತಪಡಿಸುತ್ತದೆ. ಅವರು15 ರಂದು ಬೆಳಿಗ್ಗೆ ಮದ್ರಾಸ್‌ನಲ್ಲಿ ನಿಧನರಾದರು.

ಕಾಮ್ರೇಡ್ ಪಿ ರಾಮಮೂರ್ತಿಯವರು 1964 ರಿಂದ 1985 ರವರೆಗೆ ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರಾಗಿದ್ದರು. 1970 ರಲ್ಲಿ ಸ್ಥಾಪನೆಯಾದಾಗಿನಿಂದಲೂ 1983 ರವರೆಗೆ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿ.ಐ.ಟಿ.ಯು.) ಪ್ರಧಾನ ಕಾರ್ಯದರ್ಶಿಯಾಗಿದ್ದು ಕಮ್ಯುನಿಸ್ಟ್ ಚಳುವಳಿಯ ಅಗ್ರ ಗಣ್ಯ ನಾಯಕರಾಗಿದ್ದರು. ಕರ್ನಾಟಕದಲ್ಲಿ ಬಹಳ ದೀರ್ಘಕಾಲ ಪಾರ್ಟಿ ಮತ್ತು ಟ್ರೇಡ್‌ಯೂನಿಯನ್ ಚಳುವಳಿಗೆ ಅವರು ನೀಡಿದ ಸಹಾಯ ಹಾಗೂ ಮಾರ್ಗದರ್ಶನವನ್ನು ಸಿ.ಪಿ.ಐ. (ಎಂ) ಕರ್ನಾಟಕ ರಾಜ್ಯ ಸಮಿತಿಯು ಕೃತಜ್ಞತೆಯಿಂದ ಸ್ಮರಿಸುತ್ತದೆ.

ಅವರ ಸಾವಿನಿಂದಾಗಿ ಭಾರತ ದೇಶವು ಒಬ್ಬ ಮಹಾನ್ ದೇಶಪ್ರೇಮಿಯನ್ನು ಕಮ್ಯುನಿಸ್ಟ್ ಚಳುವಳಿಯು ಒಬ್ಬ ಮಹಾನ್ ಕ್ರಾಂತಿಕಾರಿಯನ್ನು ಮತ್ತು ಶ್ರಮಜೀವಿ ಜನತೆಯು ತಮ್ಮ ಮಹಾ ನಾಯಕನನ್ನು ಕಳೆದು ಕೊಂಡಂತಾಗಿದೆ.

ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಈ ಮಹಾ ನಾಯಕನ ನೆನಪಿನಲ್ಲಿ ತನ್ನ ಕೆಂಬಾವುಟವನ್ನು ಅದ್ದುತ್ತದೆ ಮತ್ತು ತನ್ನ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ.

ಈ ವಾರ.....

★ ಶೃಂಗ ಸಭೆಯಲ್ಲಿ ರೇಗನ್ ಮತ್ತು ಗೋರ್ಬಚೇವ್ ಅವರು ಅಣ್ವಸ್ತ್ರ ಕಡಿತ ಮಾತುಕತೆಯನ್ನು ನಡೆಸುತ್ತಿರುವಂತೆಯೇ ಅಮೇರಿಕದ ನೌಕಾದಳವು ತನ್ನ ಹೊಸ ತ್ರಿಶೂಲ-2 ಕ್ಷಿಪಣಿಯನ್ನು ಪರೀಕ್ಷಿಸುವ ಕಾರ್ಯವನ್ನು ಮುಂದುವರೆಸಿದೆ.

–ಯು.ಎನ್.ಐ. ಸುದ್ದಿ

★ ಲಕ್ಷಗಟ್ಟಲೆ ಜನರು ಜನವರಿ 9ರ ಎಡ ಪಕ್ಷಗಳ ರ್‍ಯಾಲಿಯಲ್ಲಿ ಮೇಳೈಸಿದ್ದರು. ಅದರಲ್ಲಿ ಅಭೂತಪೂರ್ವವಾದದ್ದೆಂದರೆ ರ್‍ಯಾಲಿಯಲ್ಲಿ ಭಾಗವಹಿಸಿದ್ದವರಲ್ಲಿ ಬಹುಪಾಲು ಎಡ ಪಕ್ಷಗಳಿಗೆ ಭದ್ರ ನೆಲೆ ಇಲ್ಲ ಎನ್ನಲಾಗುವ ಹಿಂದಿ ಪ್ರದೇಶಗಳಿಂದಲೇ, ಅತ್ಯಂತ ಶಿಸ್ತು ಬದ್ಧವಾದ ಈರ್‍ಯಾಲಿಯಲ್ಲಿ ಪೋಲೀಸರ ಅಗತ್ಯವೇ ಇರಲಿಲ್ಲ. ಪಕ್ಷದ ಪ್ರತಿನಿಧಿಗಳೇ ರ್‍ಯಾಲಿಯ ಶಿಸ್ತನ್ನು ಕಾಪಾಡಿದ್ದರು ಇದ ಸ್ವಾತಂತ್ರ್ಯ ನಂತರ ನಡೆದ ಅತ್ಯಂತ ಮಹತ್ತರು ರ್‍ಯಾಲಿ.

–'ಹಿಂದು' ವರದಿ

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053 Editorial and Managerial Office : L-56, K. V. Temple Street,
Sultanpet B-53 Phone · 75331 Editor : Ramachandra Rao Managing Editor : N. K. Upadhyaya